ಮಾನಸಿ

ತಿಂಗಳ ಪತ್ರಿಕೆ

ಡಿಸೆಂಬರ್ : 1999

- ಪಿ. ಲಂಕೇಶ್‌ರ 'ಅವ್ವ' ಹೊಸ ಓದು
- ಸ್ತನಾರ್ಬುದ (ಸ್ತನ ಕ್ಯಾನ್ಸರ್)
- ದಲಿತ ಸ್ತ್ರೀ ಲೋಕ
- ಹೆಣ್ಣು - ಅವಳ ಸ್ವಾತಂತ್ರ್ಯ
- 'ವಾಟರ್' ಸುತ್ತಿದ ಬೆಂಕಿ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 14 ಸಂಚಿಕೆ : 11

ಡಿಸೆಂಬರ್ : 1999

ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.

ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



ದೀಪಾ ಮೆಹತಾರವರ 'ವಾಟರ್' ಚಲನಚಿತ್ರ ಕೋಮುವಾದಿಗಳ ಕೆಂಗಣ್ಣಿಗೆ ಗುರಿಯಾಗಿದೆ. ತಮ್ಮ ಜೀವನದಲ್ಲಿ ಪುರುಷರನ್ನು ತಿರಸ್ಕರಿಸಿ ಇಬ್ಬರು ಸ್ತ್ರೀಯರು ಆಪ್ತರಾಗುವ 'ಫೈಯರ್' ಚಲನಚಿತ್ರ ಸಹ ಮೂಲಭೂತವಾದಿಗಳ 'ದಾಳಿ'ಗೆ ಗುರಿಯಾಗಿತ್ತು. ವಾರಣಾಸಿಯ ಗಂಗಾ ನದಿಯ ತೀರದಲ್ಲಿ ಸಾವನ್ನು ಕಾಯುತ್ತಾ, ವಾಸಿಸುತ್ತಿರುವ ವಿಧವೆಯರ ದುಸ್ಥಿತಿ ಹಾಗೂ ಅವರ ಜೀವನದ ವಿವಿಧ ಆಯಾಮಗಳನ್ನು ಚಿತ್ರಿಸುವ ಕಥಾಸಾರವುಳ್ಳ 'ವಾಟರ್' ಚಿತ್ರದ ಸೆಟ್‌ಗಳನ್ನು ಸುಟ್ಟು ಹಾಕಿ ಚಿತ್ರೀಕರಣವನ್ನು ನಿಷೇಧಿಸುವ ನಿರಂಕುಶಕಾರಿ ಹಿಂಸಾತ್ಮಕ ಪ್ರಯತ್ನವನ್ನು ಕೋಮುವಾದಿ ಶಕ್ತಿಗಳು ಮಾಡುತ್ತಿವೆ.

ಈ ಮೂಲಭೂತವಾದಿಗಳು 'ವಾಟರ್' ಚಲನಚಿತ್ರ ನಮ್ಮ ಹಿಂದೂ ಸಂಸ್ಕೃತಿಗೆ ಮಸಿ ಬಳಿಯುತ್ತದೆಯೆಂಬ ವಿಕೃತವಾದವನ್ನು ಮುಂದಿಡುತ್ತಿದ್ದಾರೆ. ಹಿಂದೂ ಸಂಸ್ಕೃತಿ ಯಾವುದು? ಈ ಸಂಸ್ಕೃತಿಯ ಕೇಂದ್ರ ಯಾರು?-ಈ ಸಂಸ್ಕೃತಿಯ ಹೊರೆಯನ್ನು ಯಾರ ಮೇಲೆ ಹೊರಿಸಲಾಗುತ್ತಿದೆ? ಅಮಾಯಕ ವಿಧವೆಯರ ದುಸ್ಥಿತಿಯನ್ನು ಮುಚ್ಚಿಡುವುದು ನಮ್ಮ ಸಂಸ್ಕೃತಿಯ ಹೆಗ್ಗಳಿಕೆಯೆ? ಹೆಣ್ಣು ಮಕ್ಕಳ ಬದುಕುವ ಹಕ್ಕನ್ನೇ ಕಿತ್ತುಕೊಳ್ಳುವ ಈ ಸಂಸ್ಕೃತಿಯ ಹರಿಕಾರರು ಯಾರು? ಈ ಪುರುಷ ಪ್ರಧಾನ ಯಜಮಾನ್ಯ ಸಂಸ್ಕೃತಿಯು ಸ್ತ್ರೀಯರಿಗೆ ಮಾನ್ಯವೆ?

ವಾಟರ್ ಚಿತ್ರೀಕರಣವನ್ನು ನಿಷೇಧಿಸುವ ಪ್ರಯತ್ನ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವೂ ಆಗಿದೆ. ಚಿತ್ರವನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಹಕ್ಕು ಪ್ರಜಾಪ್ರಭುತ್ವದಲ್ಲಿ ಜನರಿಗಿದೆ. ದೀಪಾ ಮೆಹತಾರವರ ಪ್ರಾಮಾಣಿಕ ಕಾಳಜಿಗಿಂತ ಪ್ರಚಾರವೆ ಗಿಮಿಕ್ ಹೆಚ್ಚು ಕೆಲಸ ಮಾಡುವುದನ್ನು ಜನರು ಗುರುತಿಸುತ್ತಾರೆ. ಸಂಸ್ಕೃತಿಯ ಹರಿಕಾರರಾಗಿ ಗೂಂಡಾಗಿರಿ ನಡೆಸುವ ಕೋಮುವಾದಿ ಶಕ್ತಿಗಳು ಗಂಗಾ ನದಿಯ ತೀರದ ವಿಧವೆಯ ಬದುಕಿನ ಸುಧಾರಣೆಯತ್ತ ಬೀದಿಗಿಳಿದು ಹೋರಾಟ ನಡೆಸಲಿ.

ಕೋಮುವಾದಿ ಶಕ್ತಿಗಳು ಹಿಂದೂ ಧರ್ಮದ ರಕ್ಷಣೆಯ ಹೆಸರಿನಲ್ಲಿ ಮಹಿಳೆಯರ ಮೂಲಭೂತ ಹಕ್ಕುಗಳನ್ನೂ ಕಿತ್ತುಕೊಳ್ಳುವ ಪ್ರಯತ್ನ ಇದಾಗಿದೆ. ಸಂಸ್ಕೃತಿಯನ್ನು ಎತ್ತಿಹಿಡಿಯುವ ನೆಪದಲ್ಲಿ ಧರ್ಮ ಹಾಗೂ ಪಿತೃಪ್ರಧಾನತೆಯು ಜೊತೆ ಜೊತೆಯಾಗಿ ಸ್ತ್ರೀಯರನ್ನು ನಾಲ್ಕು ಗೋಡೆಯೊಳಗಡೆ ಬಂಧಿಸುವ ಯತ್ನವಿದು. ಈ ಶಕ್ತಿಗಳೇ ಸತಿ ಪದ್ಧತಿಯಂತಹ ಅಮಾನುಷ ಪದ್ಧತಿಯನ್ನು ಬೆಂಬಲಿಸಿವೆಯೆಂಬುದನ್ನು ಮಹಿಳೆಯರು ಮರೆಯಬಾರದು.

ಸಂಸ್ಕೃತಿಯ ಹೆಸರಿನಲ್ಲಿ ಕೋಮುವಾದಿ ಶಕ್ತಿಗಳು 'ವಾಟರ್' ಚಿತ್ರೀಕರಣವನ್ನು ನಿಲ್ಲಿಸಿರುವುದನ್ನು ಮಾನಸ ಖಂಡಿಸುತ್ತದೆ. ಪ್ರಜ್ಞಾವಂತ ನಾಗರೀಕರೆಲ್ಲರೂ ಒಗ್ಗೂಡಿ ಪ್ರತಿಭಟಿಸುವುದು ಅತ್ಯಗತ್ಯವಾಗಿದೆ.

ಅವ್ವ

ನನ್ನವ್ವ ಫಲವತ್ತಾದ ಕಪ್ಪು ನೆಲ
ಅಲ್ಲಿ ಹಸಿರುಪತ್ರದ ಹರವು, ಬಿಳಿಯ ಹೂ ಹಬ್ಬ,
ಸುಟ್ಟಷ್ಟು ಕಸುವು ನೊಂದಷ್ಟು ಹೂ ಹಣ್ಣು
ಮಕ್ಕಳೊದ್ದರೆ ಅವಳ ಅಂಗಾಂಗ ಪುಲಕ;
ಹೊತ್ತ ಬುಟ್ಟಿಯ ಇಟ್ಟು ನರಳಿ ಎವೆ ಮುಚ್ಚಿದಳು ತೆರೆಯದಂತೆ

ಪಲ್ಲಜೋಳವ ಎತ್ತಿ ಅಪ್ಪನ್ನ ಮೆಚ್ಚಿಸಿ ತೋಳಬಂದಿಯ ಗೆದ್ದು
ಹೆಂಟಿಗೊಂದು ಮೊಗೆ ನೀರು ಹಿಗ್ಗಿ;
ಮೆಣಸು ಅವರೆ ಜೋಳ ತೊಗರಿಯ ಹೊಲವ ಕೈಯಲ್ಲಿ
ಉತ್ತು,
ಹೂವಲ್ಲಿ ಹೂವಾಗಿ ಕಾಯಲ್ಲಿ ಕಾಯಾಗಿ
ಕೆಸರುಗದ್ದೆಯ ನೋಡಿಕೊಂಡು,
ಯೌವನವ ಕಳೆದಳು ಚಿಂದಿಯ ಸೀರೆ ಉಟ್ಟುಕೊಂಡು.

ಸತ್ತಳು ಈಕೆ
ಬಾಗು ಬೆನ್ನಿನ ಮುದುಕಿಗೆಷ್ಟು ಪ್ರಾಯ?
ಎಷ್ಟುಗಾದಿಯ ಚಂದ್ರ ಒಲೆಯೆದುರು ಹೋಳಿಗೆಯ ಸಂಭ್ರಮ?
ಎಷ್ಟುಸಲ ಈ ಮುದುಕಿ ಅತ್ತಳು
ಕಾಸಿಗೆ, ಕೆಟ್ಟ ಪೈರಿಗೆ, ಸತ್ತಕರುವಿಗೆ;
ಎಷ್ಟುಸಲ ಹುಡುಕುತ್ತ ಊರೂರು ಅಲೆದಳು
ತಪ್ಪಿಸಿಕೊಂಡ ಮುದಿಯ ಎಮ್ಮೆಗೆ?

ಸತಿ ಸಾವಿತ್ರಿ ಜಾನಕಿ ಊರ್ಮಿಳೆಯಲ್ಲ;
ಚರಿತ್ರೆ ಪುಸ್ತಕದ ಶಾಂತ ಶ್ವೇತ ಗಂಭೀರೆಯಲ್ಲ;
ಗಾಂಧೀಜಿ ರಾಮಕೃಷ್ಣರ ಸತಿಯರಂತಲ್ಲ;

ದೇವರ ಪೂಜಿಸಲಿಲ್ಲ, ಹರಿಕತೆ ಕೇಳಲಿಲ್ಲ;
ಮುತ್ತೈದೆಯಾಗಿ ಕುಂಕುಮ ಕೂಡ ಇಡಲಿಲ್ಲ.

ಬನದ ಕರಡಿಯ ಹಾಗೆ
ಚಿಕ್ಕ ಮಕ್ಕಳ ಹೊತ್ತು
ಗಂಡನ್ನ ಸಾಕಿದಳು ಕಾಸು ಗಂಟಿಕ್ಕಿದಳು
ನೊಂದ ನಾಯಿಯ ಹಾಗೆ ಬೈದು, ಗೊಣಗಿ ಗುದ್ದಾಡಿದಳು;

ಸಣ್ಣತನ ಕೊಂಕು, ಕೆರದಾಟ ಕೋತಿಯ ಹಾಗೆ
ಎಲ್ಲಕ್ಕೆ ಮನೆತನದ ಉದ್ಧಾರ ಸೂತ್ರ
ಈಕೆ ಉರಿದೆದ್ದಾಳು
ಮಗ ಕೆಟ್ಟರೆ, ಗಂಡ ಬೇರೆ ಕಡೆ ಹೋದಾಗ ಮಾತ್ರ

ಬನದ ಕರಡಿಗೆ ನಿಮ್ಮ ಭಗವದ್ಗೀತೆ ಬೇಡ
ನನ್ನವ್ವ ಬದುಕಿದ್ದು
ಕಾಳುಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ;
ಮೇಲೊಂದು ಸೂರು, ಅನ್ನ , ರೊಟ್ಟಿ, ಹಚಡಕ್ಕೆ;
ಸರೀಕರ ಎದುರು ತಲೆಯೆತ್ತಿ ನಡೆಯಲಿಕ್ಕೆ

ಇವಳಿಗೆ ಮೆಚ್ಚುಗೆ ಕೃತಜ್ಞತೆಯ ಕಣ್ಣೀರು;
ಹೆತ್ತದ್ದಕ್ಕೆ, ಸಾಕಿದ್ದಕ್ಕೆ, ಮಣ್ಣಲ್ಲಿ ಬದುಕಿ
ಮನೆಯಿಂದ ಹೊಲಕ್ಕೆ ಹೋದಂತೆ
ತಣ್ಣಗೆ ಮಾತಾಡುತ್ತಲೆ ಹೊರಟು ಹೋಗಿದ್ದಕ್ಕೆ

ಪಿ. ಲಂಕೇಶ್

- ಕನ್ನಡದ ಅದ್ಭುತ ಚೇತನ ಪಿ. ಲಂಕೇಶ್ ತೀರಿಕೊಂಡಿದ್ದಾರೆ. ಅವರ ನೆನಪಿಗೆ ನನ್ನ ಈ ಲೇಖನ. 'ಅವ್ವ' ಕವನದ ಬಗ್ಗೆ ನನ್ನ ಲೇಖನ ಕ್ರಿಟಿಕಲ್ ಆಗಿದ್ದರೂ ಅದರ ಕಾವ್ಯ ಶಕ್ತಿಗೆ ಮನ್ನಣೆ ನೀಡಲಾಗಿದೆ.

- ಟಿ. ಆರ್. ಚಂದ್ರಶೇಖರ್

ಪಿ. ಲಂಕೇಶ್‌ರ 'ಅವ್ವ' - ಹೊಸ ಓದು

ಟಿ. ಆರ್. ಚಂದ್ರಶೇಖರ

ಪ್ರಸ್ತಾವನೆ

ಆಧುನಿಕ ಕನ್ನಡ ಕಾವ್ಯ ಲೋಕದಲ್ಲಿ ಪಿ. ಲಂಕೇಶ್ ಅವರ ಆಚಾರ್ಯ ಕವನ 'ಅವ್ವ' ಮಹತ್ವದ, ಗುರುತ್ವದ ಸ್ಥಾನವನ್ನು ಪಡೆದಿದೆ. ನವ್ಯಕಾವ್ಯ ವಿಮರ್ಶೆಯ ಪರಿಭಾಷೆಯಲ್ಲಿ ಹೇಳುವುದಾದರೆ 'ಅವ್ವ' ಕವನವು 'ಸಾವಯವ ಶಿಲ್ಪದ ಸಮಗ್ರೀಕರಣ'ವನ್ನು ಸಾಧಿಸಿದೆ. ಈ ಕವನದ ವಸ್ತುವನ್ನು ಕವಿಯು ಸಾವಯವ ಜೈವಿಕ ನೆಲೆಯಲ್ಲಿ ಪರಿಭಾವಿಸಿಕೊಂಡಿರುವುದರ ಬಗ್ಗೆ ಭಿನ್ನಾಭಿಪ್ರಾಯ ಸಾಧ್ಯ. ಈ ಬಗ್ಗೆ ಮುಂದೆ ಲೇಖನದಲ್ಲಿ ವಿವರವಾದ ಚರ್ಚೆ ಇದೆ. ಶಿಲ್ಪದ ಮೋಹಕತೆಗೆ ಮರುಳಾಗಿ ನಾವು ಕವನದ ವಿಷಯ ವಸ್ತುವನ್ನು ಕವಿಯು ಕಟ್ಟಿರುವ ಬಗೆಯನ್ನು ಮರೆತುಬಿಡಬಾರದು! 70 ಮತ್ತು 80ರ ದಶಕಗಳಲ್ಲಿ ಕನ್ನಡ ಓದುಗರು ಈ ಕವನಕ್ಕೆ ತೆರೆದುಕೊಂಡ ರೀತಿಗೂ ಮತ್ತು ಇಂದು ಓದುಗರು ಕವನದ ಜೊತೆ ನಡೆಸುವ ಅನುಸಂಧಾನಕ್ಕೂ ಮೂಲಭೂತ ವ್ಯತ್ಯಾಸ ಸಾಧ್ಯ. ಹಿಂದೆ ಕವನವನ್ನು ಓದಿದಾಗ ಒಂದು ಬಗೆಯ ರೋಮಾಂಚನ ಉಂಟಾದುದು ಇದೆ. ಆದರೆ ಇಂದು ಕವನವನ್ನು ಓದಿದಾಗ ಅದು ಉತ್ಸಾಹವನ್ನು ಕೆರಳಿಸುತ್ತದೆ ಎಂಬುದರ ಬಗ್ಗೆ ನನಗೆ ಅನುಮಾನವಿದೆ. 'ಜೈವಿಕ ನಿಯತಿ'ಯ ಆಧಾರದ ಮೇಲೆ ಕವನದ ಕಟ್ಟೋಣ ಇರುವುದರಿಂದ ಇಲ್ಲಿ ಅನೇಕ ಪ್ರಶ್ನೆಗಳು ಸಾಧ್ಯ. ಈ ಕವನವು ಪ್ರಕೃತಿಯ ಸಮೃದ್ಧತೆಯನ್ನು, ಅವ್ವನ ಫಲವಂತಿಕೆಯನ್ನು 'ಸೆಲಬ್ರೇಟ್' ಮಾಡುತ್ತದೆ. ಆದರೆ ಅವ್ವನ ಸೆರೆಬ್ರಲ್ ಬಗ್ಗೆ ಕವನ ಏನನ್ನು ಹೇಳುವುದಿಲ್ಲ. ಅವ್ವನನ್ನು ಪ್ರಕೃತಿಗೆ ಸಂವಾದಿಯನ್ನಾಗಿ ಮಾಡಿ, ಅವ್ವನ ಸಂತಾನೋತ್ಪತ್ತಿ ಮತ್ತು ಸಂಗೋಪನಾ ಕಾರ್ಯಗಳನ್ನು ವೈಭವೀಕರಿಸಿ ಕವನವು ಸಮಾಜದಲ್ಲಿ ಈಗಾಗಲೆ ಹೆಣ್ಣಿನ ಬಗ್ಗೆ ಇರುವ 'ಎಸೆನ್ಸಿಯಲಿಸ್ಟ್' ಧೋರಣೆಯನ್ನು ಸಮರ್ಥಿಸುತ್ತಿದೆ -ಮುಂದುವರಿಸುತ್ತಿದೆ ಎಂಬುದನ್ನು ಕುರಿತು ನಾಲ್ಕಾರು ಸಂಗತಿಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಕವನದ - ಕವಿಯ ಸ್ವಾಯತ್ತತೆಯನ್ನು, ಅದರ 'Intrinsic' ಗುಣವನ್ನು ಗೌರವಿಸುತ್ತ ಇಲ್ಲಿ ಸಮಾಜ ವಿಜ್ಞಾನಗಳ ನೆಲೆಯಿಂದ 'ಅವ್ವ' ಕವನವನ್ನು ಪರಿಕಿಸುವ ಪ್ರಯತ್ನ ಮಾಡಲಾಗಿದೆ.

* * *

ಪ್ರಕೃತಿ-ಸಂಸ್ಕೃತಿ

ಇಲ್ಲಿ ಅವ್ವನನ್ನು ಪ್ರಕೃತಿಗೆ ಸಂವಾದಿಯನ್ನಾಗಿ ಮಾಡಲಾಗಿದೆ ಎಂಬುದನ್ನು ಈಗಾಗಲೇ ಹೇಳಿಯಾಗಿದೆ. ಅವ್ವನನ್ನು ಪ್ರಕೃತಿಗೆ ಸಂವಾದಿಯನ್ನಾಗಿ ಮಾಡಿರುವದಕ್ಕೆ ಕವನದಲ್ಲಿ ದಂಡಿಯಾಗಿ ನಿದರ್ಶನಗಳು ದೊರೆಯುತ್ತವೆ. ವಿಮರ್ಶಕರು ಈಗಾಗಲೆ ಸರಿಯಾಗಿ ಗುರುತಿಸಿರುವಂತೆ ಈ ಕವನದಲ್ಲಿ ಸಸ್ಯ ಜಗತ್ತಿಗೆ ಹಾಗೂ ಪ್ರಾಣಿ ಜಗತ್ತಿಗೆ ದೊರೆತಿರುವಷ್ಟು ಸ್ಪೇಸು ಮನುಷ್ಯ ಜಗತ್ತಿಗೆ ದೊರೆತಿಲ್ಲ. ಸಸ್ಯ ಮತ್ತು ಪ್ರಾಣಿ ಜಗತ್ತಿಗೆ ದೊರೆತಿರುವ ಸ್ಪೇಸ್‌ನಲ್ಲಿ: ಕವನವದ ಸಾವಯುವ ಬೇರುಗಳನ್ನು ಗುರುತಿಸಬಹುದಾಗಿದೆ. ಇಡೀ ಕವನವು ಸಮೃದ್ಧತೆಯನ್ನು-ಫಲವಂತಿಕೆಯನ್ನು ಭೂಮಿಕೆಯನ್ನಾಗಿ ಮಾಡಿಕೊಂಡಿದೆ.

ಹಸಿರುಪತ್ರ, ಹೂ, ಹಣ್ಣು, ಕಾಯಿ, ಮೆಣಸು, ಅವರೆ, ತೊಗರಿ, ಜೋಳ, ಪೈರು - ಇವು ಇಲ್ಲಿನ ಸಸ್ಯ ಜಗತ್ತು.

ಕರು, ಎಮ್ಮೆ, ಕರಡಿ(ಬನದ), ನಾಯಿ, ಕೋತಿ - ಇವು ಇಲ್ಲಿನ ಪ್ರಾಣಿ ಜಗತ್ತು.

ಅವ್ವ, ಅಪ್ಪ, ಮಕ್ಕಳು ಒಂದುಕಡೆ ಮತ್ತು ಅಪ್ರತ್ಯಕ್ಷವಾಗಿ ಸಾವಿತ್ರಿ, ಜಾನಕಿ, ಊರ್ಮಿಳ ಮುಂತಾದವರು ಇನ್ನೊಂದು ಕಡೆ - ಈ ಕವನದಲ್ಲಿ ಮನುಷ್ಯ ಜಗತ್ತನ್ನು ಪ್ರತಿನಿಧಿಸುತ್ತಾರೆ. ಇಲ್ಲಿ ಅವ್ವ ಕಪ್ಪುನೆಲ. ನೆಲದ ಗುಣವೇನೆಂದರೆ ಅದು ಸುಟ್ಟಷ್ಟು ಸಮೃದ್ಧವಾಗುತ್ತದೆ, ಅದರ ಕಸುವು ವರ್ಧಿಸುತ್ತದೆ. ಮಣ್ಣು ಉಳುಮೆಗೆ ಒಳಗಾಗಿ ನೊಂದರೆ ಅಲ್ಲಿ ಹೂ ಹಣ್ಣು ದೊರೆಯುತ್ತವೆ. ಇದೇ ರೀತಿ ಅವ್ವನು ಸಹ ತನ್ನ ದೇಹವನ್ನು ದುಡಿಮೆಗೆ ಒಡ್ಡಿ ಕುಟುಂಬವನ್ನು, ಗಂಡನನ್ನು, ಮಕ್ಕಳನ್ನು ಸಾಕುತ್ತಾಳೆ. ಈ ಕವನ ಪ್ರಕೃತಿಯನ್ನು ನೆಮ್ಮಿಕೊಂಡಿರುವಷ್ಟು ಸಂಸ್ಕೃತಿಯನ್ನು ನೆಮ್ಮಿಕೊಂಡಿಲ್ಲ. ಇಲ್ಲಿ ಅವ್ವ ತಾನು ಮೊಗೆಯಲ್ಲಿ ನೀರು ಹಾಕುತ್ತಾಳೆ. ಕೈಯಲ್ಲಿ ಹೊಲ ಉಳುತ್ತಾಳೆ.

ಇಡೀ ಕವನದಲ್ಲಿ ಅವ್ವ ಸಂಗೋಪನೆಯಲ್ಲಿ ನಿರತಳಾಗಿರುವುದು ಕಂಡಬರುತ್ತದೆ. ಇದು ಪ್ರಕೃತಿಗುಣ. ಸಂಸ್ಕೃತಿಗೆ ಸಂಪಾದನೆ ಗುಣವಿರುತ್ತದೆ. ಪ್ರಕೃತಿಗೆ ಸಂಗೋಪನೆ ಗುಣವಿರುತ್ತದೆ. ಇಲ್ಲಿನ ಅವ್ವ ಸಂಗೋಪನೆ ಗುಣದ ಸಾಕಾರಮೂರ್ತಿ,

ಏಕೆಂದರೆ ಈ ಅವ್ವನಿಗೆ 'ಎಲ್ಲಕೆ ಮನೆತನದ ಉದ್ಧಾರ ಸೂತ್ರ' ಈ ಅವ್ವ ಬದುಕಿದ್ದು 'ಕಾಳುಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ' ಪ್ರಕೃತಿಯಂತೆ ಈಕೆಯದು ಹೊಟ್ಟೆಬಟ್ಟೆ ಬದುಕು (Subsistence living). ಈಕೆಯ ದುಡಿಮೆಯ ಅಂತಿಮಗುರಿ 'ಮೇಲೊಂದು ಸೂರು, ಅನ್ನ, ರೊಟ್ಟಿ, ಹಚಡ.'

ಇಲ್ಲಿ ಕವಿಯು ಕವನದ ಕೊನೆಯಲ್ಲಿ ಕೃತಜ್ಞತೆ ಸಲ್ಲಿಸುವುದು ಅವ್ವನ ಪ್ರಾಕೃತಿಕ/ಜೈವಿಕ ಗುಣಗಳಾದ 'ಹೆತ್ತದ್ದಕ್ಕೆ' ಮತ್ತು 'ಸಾಕಿದ್ದಕ್ಕೆ'.

ಈ ಕವನದಲ್ಲಿ ಪ್ರಾಣಿಗಳನ್ನು ಪರಿಭಾವಿಸಿಕೊಂಡಿರುವ ಬಗೆಯು ವಿಶಿಷ್ಟವಾದುದಾಗಿದೆ. ದೈನಂದಿನ ಬದುಕಿನಲ್ಲಿ ನಾಯಿ-ಕೋತಿಗಳ ಗುಣಗಳನ್ನು ಹೀಯಾಳಿಕೆಗೆ, ತೆಗಳಿಕೆಗೆ, ಚೀಮಾರಿ ಹಾಕಲು ಸಾಮಾನ್ಯವಾಗಿ ಬಳಸಲಾಗುತ್ತದೆ. 'ಬಳ್ಳೆ ನಾಯಿಯಂತವನು' ಎಂದೋ, ಒಳ್ಳೆ ಕೋತಿ ಬುದ್ಧಿ ಅವನದು' ಎಂದೋ ಹೀಗಳೆಯುವಲ್ಲಿ ಇವುಗಳನ್ನು ಬಳಸುವುದು ರೂಢಿಯಿದೆ. ಆದರೆ ಇಲ್ಲಿ ಕವನದಲ್ಲಿ ನಾಯಿಯ ಗುಣವನ್ನು, ಕೋತಿಯ ಗುಣವನ್ನು ಅತ್ಯಂತ ಪಾಸಿಟಿವ್ ಆಗಿ ನೋಡಲಾಗಿದೆ. ಇಲ್ಲೂ ಕೂಡ ಕವನವು ಪ್ರಕೃತಿಯ ಕಡೆ ತುಯ್ಯುತ್ತಿರುವುದನ್ನು ಕಾಣಬಹುದು.

* * *

ಆರ್ಥಿಕೋತ್ಪಾದನೆ ಮತ್ತು ಸಂತಾನೋತ್ಪಾದನೆ

ಜೈವಿಕ ನಿಯತಿಯ ನೆಲೆಯಲ್ಲಿ ಲಿಂಗ ಸಂಬಂಧಗಳನ್ನು ಪರಿಭಾವಿಸಿಕೊಳ್ಳುವ ನೆಲೆಯಲ್ಲಿ ಆರ್ಥಿಕೋತ್ಪಾದನೆ ಮತ್ತು ಸಂತಾನೋತ್ಪಾದನೆಗಳನ್ನು ಪರಸ್ಪರ ಪ್ರತ್ಯೇಕ ಕಾರ್ಯಭಾರವಾಗಿ ವರ್ಗೀಕರಿಸಿಕೊಳ್ಳುವುದು ವಾಡಿಕೆಯಲ್ಲಿದೆ. ಜೈವಿಕ ನಿಯತಿಯನ್ನು ಒಪ್ಪಿಕೊಂಡೆ ಹೊರಡುವ ಕವನವು ಅವ್ವನಿಗೆ ಸಂತಾನೋತ್ಪತ್ತಿ ಕಾರ್ಯಭಾರವನ್ನು ವಹಿಸಿ ಕೈತೊಳೆದುಕೊಂಡಿರುವ ಪರಿ ಆಶ್ಚರ್ಯ ಹುಟ್ಟಿಸುತ್ತದೆ. ನಿಜವಾಗಿ ಕವನದಲ್ಲಿ ಆರ್ಥಿಕೋತ್ಪಾದನೆಯಲ್ಲಿ ತೊಡಗಿರುವವಳು 'ಅವ್ವ'ನೇ ಆಗಿದ್ದಾಳೆ, ಇಲ್ಲಿ ಕಾಸು ಗಂಟಿಕ್ಕುವುದು; ಅವ್ವ; ಹೆಂಟೆಗೊಂದು ಮೊಗೆ ನೀರು ಚೆಲ್ಲುವುದು ಅವ್ವ; ಹೊಲದ ಕೈಯಲ್ಲಿ ಉತ್ತು ಬೆಳೆ ಬೆಳೆಯುವವಳು ಅವ್ವ; ಕಾಸಿಗೆ, ಕೆಟ್ಟ ಪೈರಿಗೆ, ಸತ್ತಕರುವಿಗೆ, ತಪ್ಪಿಸಿಕೊಂಡ ಮುದಿಯ ಎಮ್ಮೆಗೆ ಪೇಚಾಡುವವಳು ಅವ್ವ. ವಾಸ್ತವವಾಗಿ ಇವೆಲ್ಲ ಆರ್ಥಿಕೋತ್ಪಾದನೆ. ಆದರೆ ಕವನವು ಇವುಗಳ ಸಾಮಾಜಿಕ ನೆಲೆಗಳನ್ನು ಗುರುತಿಸದೆ ಅವುಗಳ ಜೈವಿಕ ನೆಲೆಗಳನ್ನು ಪರಿಶೋಧಿಸುವಲ್ಲಿ ಮಗ್ನವಾಗಿರುವಂತೆ ಕಾಣುತ್ತದೆ.

ಈ ಕವನದಲ್ಲಿ ಅವ್ವ ದುಡಿಯುತ್ತಾಳೆ, ಮೈ ಮುರಿಯ ದುಡಿಯುತ್ತಾಳೆ. ಆದರ ಈ ಎಲ್ಲ ದುಡಿಮೆ-ಬೆಳೆ ಬೆಳೆಯೋದು ಯಾವುದಕ್ಕೆ ಅಂದರೆ ಗಂಡನನ್ನು ಸಾಕಲು! ಮತ್ತು ಮಕ್ಕಳನ್ನು ಬೆಳೆಸಲು, ಈ ಅವ್ವನಿಗೆ ಯಾವುದರ ಬಗ್ಗೆಯು ಅತೃಪ್ತಿ, ಅಸಮಧಾನ ಇಲ್ಲ. ಕೇವಲ ಎರಡರ ಬಗ್ಗೆ ಮಾತ್ರ ಆಕೆಗೆ ಸಿಟ್ಟು-ಕೋಪ. ಮಗ ಕೆಟ್ಟರೆ, ಗಂಡ ಬೇರೆ ಕಡೆಹೋದಾಗ ಮಾತ್ರ ಆಕೆ ಸಿಟ್ಟಿಗೇಳುತ್ತಾಳೆ. ಉಳಿದಂತೆ ಆಕೆಯ ಕೌಟುಂಬಿಕ ಸಂಬಂಧ ಸಂಘರ್ಷ ರಹಿತವಾದದ್ದು. ಇದು ಜೈವಿಕ ನಿಯತಿಯಿಂದ ಮಾತ್ರ ಹುಟ್ಟಿಕೊಳ್ಳಬಹುದಾದ ತಥ್ಯ. ಜೈವಿಕ-ಪ್ರಕೃತಿ ಜನ್ಯ ನಂಬಿಕೆ ಇಲ್ಲಿ ಎಷ್ಟು ಪ್ರಖರವಾಗಿದೆಯೆಂದರೆ ಇಲ್ಲಿ 'ಅವ್ವ'ನ ಸಾವು ಕೂಡ ಸಹಜವೆನ್ನುವಂತೆ, ನೈಸರ್ಗಿಕವೆನ್ನುವಂತೆ, ಸಾವಯವ ರೀತಿಯಲ್ಲಿ ನಡೆದು ಹೋಗುತ್ತದೆ.

ಈ ಕವನದಲ್ಲಿ ಅವ್ವನ ದೃಷ್ಟಿಯಿಂದ ಸಂತಾನೋತ್ಪಾದನೆಯ ಪ್ರಾಥಮಿಕ, ಪ್ರಧಾನ, ಆರ್ಥಿಕೋತ್ಪಾದನೆಯು ಅನುಷಂಗಿಕ, ಅಧೀನ, ಹಾಗಾದರೆ ಕವನವು 'ಅವ್ವ'ನ ಅಧೀನ ಸ್ಥಿತಿಗತಿಯನ್ನು-ಸ್ಥಾನಮಾನವನ್ನು ಸಮರ್ಥಿಸುತ್ತಿದೆಯೆ? ಹೌದು ಎಂದು ಉತ್ತರ ಹೇಳದೆ ಬೇರೆ ಮಾರ್ಗವಿಲ್ಲ. ಇಲ್ಲಿ ಅವ್ವನ ಆರ್ಥಿಕೋತ್ಪಾದನೆ ಕಾರ್ಯಭಾರವನ್ನು ಸಂತಾನೋತ್ಪತ್ತಿಯ ವ್ಯಾಪ್ತಿಗೆ ಸೇರಿಸಿ ಕವನವು ಅವ್ವನ ಭದುಕು ಇರಬೇಕಾದುದೆ ಹೀಗೆ ಎಂಬ ಜೈವಿಕ ನಿಯತಿಯನ್ನು ಪ್ರತಿಪಾದಿಸುತ್ತಿರುವಂತೆ ಕಾಣುತ್ತದೆ. ಇಡೀ ಕವನದಲ್ಲಿ ಅವ್ವ ತನ್ನ ದೇಹವನ್ನು ಮನೆತನದ ಉದ್ಧಾರಕ್ಕೆ ತೇದುಕೊಂಡು, ಸುಟ್ಟುಕೊಂಡು ಸೇವೆ ಸಲ್ಲಿಸಿದ್ದಾಳೆ. ಈ ಬಗೆಯ altruistic ಗುಣವನ್ನು ಅವ್ವನಿಗೆ ಕವನ ಆರೋಪಿಸುತ್ತಿದೆ ವಿನಾ ಅದೇ ಅವ್ವನ ಗುಣವಲ್ಲ. ಕವನದಲ್ಲಿ ಅವ್ವನ ದುಡಿಮೆಯನ್ನು ಜೈವಿಕ-ಪ್ರಾಕೃತಿ ನೆಲೆಗೆ ಸಮಾಜವು ಗಂಟುಹಾಕಿದೆ. ಕವನದಲ್ಲೇ ಸ್ಪಷ್ಟವಾಗಿ ಚಿತ್ರಿತವಾಗಿರುವಂತೆ ಅವಳ ದುಡಿಮೆ -ಆಸೆ-ಆಕಾಂಕ್ಷೆಗಳಿಗೆ ಸಾಮಾಜಿಕ ಆಯಾಮವಿದೆ.

* * *

ಅವ್ವನ ಬದುಕು ಖಾಸಗಿಯಾದದ್ದೆ?

ಜೈವಿಕ ನಿಯತಿಯ ಪ್ರಕಾರ ಅವ್ವನ ಜಗತ್ತು ಖಾಸಗಿಯಾದುದ್ದು ಮತ್ತು ಕುಟುಂಬದ ಚೌಕಟ್ಟಿಗೆ ಸೇರಿದ್ದು. ಅವಳ ದುಡಿಮೆಯನ್ನು ಸಾರ್ವಜನಿಕವಾದುದೆಂದು, ಸಾಮಾಜಿಕವಾದುದೆಂದು ಜೈವಿಕ ನಿಯತಿ ಒಪ್ಪುವುದಿಲ್ಲ. ಆದರೆ ಕವನದಲ್ಲಿ ಅವ್ವ ಮನೆಯೊಳಗಿದ್ದುದು ಇಲ್ಲವೆ ಇಲ್ಲ. ಹೆಂಟೆಗೊಂದು ಮೊಗೆ ನೀರು ಚೆಲ್ಲುವಲ್ಲಿ, ತಪ್ಪಿಸಿಕೊಂಡ ಮುದಿಯ ಎಮ್ಮೆಯನ್ನು ಹುಡುಕುಯಲ್ಲಿ, ಕೆಸರುಗದ್ದೆಯಲ್ಲಿ, ಕಪ್ಪು ನೆಲದಲ್ಲಿ ಅವ್ವನ ಬದುಕು ಅರಳಿದೆ. ಇಲ್ಲಿ ಅವ್ವನ ಬದುಕು ಖಾಸಗಿಯಾದುದಲ್ಲ. ಖಾಸಗಿಯದ್ದನ್ನಾಗಿ ಮಾಡಲು, ಕುಟುಂಬದ ಚೌಕಟ್ಟಿಗೆ ಮಿತಿಗೊಳಿಸಲು ಪ್ರಯತ್ನಿಸಲಾಗಿದೆ. ಆದರೆ ಕವಿಯ ಉದ್ದೇಶವನ್ನು

ಮೀರಿ ಕವನವು ಅವ್ವನ ಸಾಮಾಜಿಕ, ಸಾರ್ವಜನಿಕ, ಸಾಂಸ್ಕೃತಿಕ ಆಯಾಮವನ್ನು ಅನಾವರಣಗೊಳಿಸಿ ಬಿಡುತ್ತದೆ. ಇಡೀ ಕವನದಲ್ಲಿ ಅವ್ವ ಮನೆಯೊಳಗಿದ್ದುದರ ಸೂಚನೆ 'ಉಗಾದಿಯ ಚಂದ್ರ ಮತ್ತು ಹೋಳಿಗೆಯ ಸಂಭ್ರಮ'ದಲ್ಲಿ ಮಾತ್ರ ಸಿಗುತ್ತದೆ. ಉಳಿದಂತೆ ಅವ್ವನ ಜಗತ್ತು 'ಪಬ್ಲಿಕ್' ಆಗಿರುವುದು ಸ್ಪಷ್ಟವಿದೆ. ವಾಸ್ತವವಾಗಿ ಉಗಾದಿಯ ಚಂದ್ರ ಇಲ್ಲಿ ಬರುವುದು ಅವ್ವನ ಪ್ರಾಯವನ್ನು ಸೂಚಿಸುವ ಸಲುವಾಗಿ! ಅಂದ ಮೇಲೆ ಅವ್ವನ ಬದುಕು ಸಂಪೂರ್ಣವಾಗಿ ಸಾರ್ವಜನಿಕವಾದುದಾಗಿದೆ.

* * *

ಅವ್ವನ ದೈನಂದಿನ ಹಿತಾಸಕ್ತಿಗಳು

ಮಹಿಳೆಯರ ಹಿತಾಸಕ್ತಿಗಳ ಹಿಂದಿನ ರಾಜಕಾರಣವನ್ನು ಕುರಿತಂತೆ ಸ್ತ್ರೀವಾದಿಗಳು ಅತ್ಯಂತ ಉಪಯುಕ್ತವಾದ ಚರ್ಚೆ ನಡೆಸಿಕೊಂಡು ಬಂದಿದ್ದಾರೆ. ಈ ದಿಶೆಯಲ್ಲಿ ಮೊಲಿನಿಕ್ಸ್ (Molyneux. M)ಳ ಕಾಣಿಕೆ ತುಂಬಾ ಮಹತ್ವವಾದುದು. ಮೊಲಿನಿಕ್ಸ್ ಮಹಿಳೆಯ ಹಿತಾಸಕ್ತಿಗಳನ್ನು ಮಹಿಳೆಯ ಅಗತ್ಯಗಳನ್ನು ಎರಡು ಗುಂಪು ಮಾಡುತ್ತಾಳೆ. ಮೊದಲನೆಯದು ಮಹಿಳೆಯರ ದೈನಂದಿನ ಹೊಟ್ಟೆ ಬಟ್ಟೆ ಅಗತ್ಯಗಳು. ಇವುಗಳನ್ನು ಆರ್ಥಿಕ ಹಿತಾಸಕ್ತಿಗಳು ಎಂದು ಕರೆಯಬಹುದು. ಎರಡನೆಯದು ಮಹಿಳೆಯರ ಸಂಘರ್ಷಣಾತ್ಮಕ ಅಗತ್ಯಗಳು. ಇವುಗಳನ್ನು ಲಿಂಗ ಸಂಬಂಧಿ ಸಾಮಾಜಿಕ ಅಗತ್ಯಗಳು ಎಂದು ಕರೆಯಬಹುದು. ಆಹಾರ, ಆರೋಗ್ಯ, ಅಕ್ಷರ, ಆಸರೆ, ಮುಂತಾದವು ಆರ್ಥಿಕ ವೆನ್ನಬಹುದಾದ, ದೈನಂದಿನ ಹೊಟ್ಟೆ ಬಟ್ಟೆ ಅಗತ್ಯಗಳು. ಇವುಗಳನ್ನು ಪೂರೈಸಿಕೊಡಲು ಸಮಾಜ-ಸರ್ಕಾರ ಹಿಂದು ಮುಂದು ನೋಡುವುದಿಲ್ಲ. ಏಕೆಂದರೆ ಅದರಿಂದ ಸಮಾಜ-ಸರ್ಕಾರಗಳು ಕಳೆದುಕೊಳ್ಳುವುದೇನೂ ಇಲ್ಲ. ಆದರೆ ಮಹಿಳೆಯರ ಲಿಂಗಸಂಬಂಧಿ ಅಗತ್ಯಗಳು, ಸಂಘರ್ಷಣಾತ್ಮಕ ಹಿತಾಸಕ್ತಿಗಳನ್ನು ಪೂರೈಸು ವುದಿರಲಿ, ಒಪ್ಪಿಕೊಳ್ಳಲು ಸಮಾಜ-ಸರ್ಕಾರಗಳು ಸಿದ್ಧವಿಲ್ಲ. ಮೊಲಿನಿಕ್ಸ್ ಹೇಳುವ ಮಹಿಳೆಯರ ಸಂಘರ್ಷಣಾತ್ಮಕ ಹಿತಾಸಕ್ತಿಗಳು ಯಾವುವೆಂದರೆ, ಲಿಂಗ ಸಂಬಂಧಿ ಶ್ರಮವಿಭಜನೆಯ ನಾಶ, ಮಕ್ಕಳ ಪೋಷಣೆ ಮತ್ತು ಗೃಹವಾರ್ತೆ ಜವಾಬುದಾರಿಗಳ ಹಂಚಿಕೆ, ಗಂಡಂಸರ ಹಿಂಸೆ, ಮಹಿಳೆಯರ ಲೈಂಗಿಕ ಶೋಷಣೆ, ಬಲವಂತ ಮದುವೆ ಮುಂತಾದವುಗಳ ವಿರುದ್ಧದ ರಕ್ಷಣೆ.

'ಅವ್ವ' ಕವನವು ಮಹಿಳೆಯರ ದೈನಂದಿನ ಹೊಟ್ಟೆ ಬಟ್ಟೆ ಅಗತ್ಯಗಳ ಬಗ್ಗೆ, ಹಿತಾಸಕ್ತಿಗಳ ಬಗ್ಗೆ ಮಾತನಾಡುತ್ತದೆ. ಮಹಿಳೆಯರ, ಅವ್ವನ ಸಂಘರ್ಷಣಾತ್ಮಕ ಹಿತಾಸಕ್ತಿಗಳ ಬಗ್ಗೆ ಎಲ್ಲೂ ಸೂಚನೆಯನ್ನು ನೀಡುವುದಿಲ್ಲ. ಚಿಕ್ಕಮಕ್ಕಳನ್ನು ಅವ್ವನೆ ಯಾಕೆ ಹೊತ್ತು ಸಾಕಬೇಕು? ಗಂಡನಿಗಾಗಿ ಅವ್ವ ಕಾಸು ಗಂಟಿಕ್ಕುವುದು ಯಾಕೆ? ಅವಳಿಗಾಗಿ 'ಅಪ್ಪ' ಏನು ಮಾಡಿದ? ಅವ್ವನ ಮಗ ಏನು ಮಾಡಿದ? ಅಪ್ಪಯಾಕೆ ಮಕ್ಕಳನ್ನು ಸಾಕುವ ಜವಾಬುದಾರಿ ಹೊರಬಾರದು?. ಕವನದಲ್ಲಿ ಮುದುಕಿ ಅಳೋದು ಕಾಸಿಗೆ, ಕೆಟ್ಟ ಪೈರಿಗೆ, ಸತ್ತ ಕರುವಿಗೆ! ಅವಳಿಗಾಗಿ ಅವಳು ಎಂದು ಉರಿದೇಳಲಿಲ್ಲ! ಅವಳಿಗಾಗಿ ಅವಳು ಯಾಕೆ ಉರಿದೇಳಲಿಲ್ಲ? ಅವಳು ಉರಿದೇಳದ ಹಾಗೆ ಮಾಡಿರುವ ಸಂಗತಿಯಾದರು ಯಾವುದು? ಇಂತಹ ಪ್ರಶ್ನೆಗಳ ಬಗ್ಗೆ 'ಅವ್ವ' ಕವನ ಏನನ್ನೂ ಹೇಳುವುದಿಲ್ಲ. ಲಿಂಗ ಸಂಬಂಧಗಳ ನೆಲೆಯಲ್ಲಿ, ಲಿಂಗ ಸಂಬಂಧಿ ಸಂಘರ್ಷದ ನೆಲೆಯಲ್ಲಿ ಕವನವು ಅವ್ವನನ್ನು ನೋಡಲು ವಿಫಲವಾಗಿದೆ. ಅವ್ವನನ್ನು ಕವನವು ಕೇವಲ Demographic entityಯಾಗಿ ನೋಡುತ್ತದೆ ವಿನಾ ಆಕೆಯನ್ನು Social reality ಯಾಗಿ ನೋಡುವುದಿಲ್ಲ. 'ಅವ್ವ'ಕೇವಲ demographic ಸಂಗತಿಯಲ್ಲ. ಅಲ್ಲಿ ಲಿಂಗ ಸಂಬಂಧಗಳ ಪ್ರಶ್ನೆ ಇದೆ, ಜೆಂಡರ್ ಪ್ರಶ್ನೆ ಇದೆ.

* * *

'ಅವ್ವ' ಶ್ರೇಷ್ಠ ಕವನ ಎಂಬುದರ ಬಗ್ಗೆ ನನಗೆ ಅನುಮಾನವಿಲ್ಲ. ಈ ಮಾತನ್ನು ಮೊದಲೆ ಹೇಳಿದ್ದೇನೆ. ಇದು ಸರಳವಾದ ಕವನವಲ್ಲ. ಅವ್ವನ ಬಗ್ಗೆ ಕವನವೇ ಹೇಳುವ 'ಸುಟ್ಟಷ್ಟು ಕಸುವು' ಎಂಬಂತೆ ಮತ್ತೆ ಮತ್ತೆ ಓದಿಸಿಕೊಳ್ಳುವ ಕವನ ವಿವಿಧ ಆಯಾಮಗಳನ್ನು ತನ್ನ ಶರೀರದೊಳಗೆ ಅಡಗಿಸಿಕೊಂಡಿದೆ. ಈ ಕವನದ ಅವೈದಿಕ ಸ್ವರೂಪದ ಬಗ್ಗೆಯೂ ಮಾತನಾಡಬಹುದು. ಶೂದ್ರ ನೆಲೆಗಳ ಬಗ್ಗೆ ಕೂಡ ಚರ್ಚಿಸ ಬಹುದು. 'ಬನದ ಕರಡಿಗೆ ನಿಮ್ಮ ಭಗವದ್ಗೀತೆ ಬೇಡ' ಎನ್ನುವಲ್ಲಿ, 'ಚರಿತ್ರೆ ಪುಸ್ತಕದ ಶಂತ ಶ್ವೇತ ಗಂಭೀರೆಯಲ್ಲ' ಎನ್ನುವಲ್ಲಿ, 'ದೇವರ ಪೂಜಿಸಲಿಲ್ಲ, ಹರಿಕತೆ ಕೇಳಲಿಲ್ಲ, ಮುತ್ತೈದೆಯಾಗಿ ಕುಂಕುಮ ಕೂಡ ಇಡಲಿಲ್ಲ' ಎನ್ನುವಲ್ಲಿ ಕವನದ ಅವೈದಿಕ ಶೂದ್ರ ನೆಲೆಗಳನ್ನು ಗುರುತಿಸಬಹುದಾಗಿದೆ. ಆದರೆ ಮೂಲಭೂತವಾಗಿ ಕವನವು 'ಅವ್ವ'ನಿಗೆ ಸಾಂಸ್ಕೃತಿಕವಾದ ಸಾಮಾಜಿಕವಾದ ನೆಲೆಯಿಂದ ಎಂಬುದನ್ನು ಸೂಚಿಸುವುದಿಲ್ಲ. 'ಜೈವಿಕ ನಿಯತಿ'ಗೆ ಅವ್ವನ ಬದುಕನ್ನು ಕವನ ಒಪ್ಪಿಸಿಬಿಟ್ಟಿದೆ. ಸಂತಾನೋತ್ಪತ್ತಿಗೆ, ಸಂಗೋಪನೆಗೆ ಅವ್ವನನ್ನು ಕಟ್ಟಿಹಾಕಿರುವ ಕವನವು ಚಿತ್ರಿಸುವುದು ಮಾತ್ರ ಆಕೆಯ ಆರ್ಥಿಕೋತ್ಪಾದನೆ ಬಗ್ಗೆ, ಸಂಪಾದನೆ ಚಟುವಟಿಕೆಗಳ ಬಗ್ಗೆ ಎನ್ನುವುದು ತುಂಬಾ ವಿಶಿಷ್ಟವಾದ ಸಂಗತಿಯಾಗಿದೆ. ಈ ಕಾರಣಕ್ಕೆ ಕವನ ಯಶಸ್ವಿಯೂ ಆಗಿಬಿಟ್ಟಿದೆ. ಎನಿಸುತ್ತದೆ. ಆದರೆ ಪ್ರಕೃತಿಗೆ ಅವ್ವನನ್ನು ಸಮೀಕರಿಸಿ ಕವನವು ಅವಳ ಅಧೀನ ಸ್ಥಿತಿಯನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಇದು ಇಲ್ಲಿನ ಸಮಸ್ಯೆ.

ಅಕ್ಕ; ಚಿಟ್ಟೆ ಮತ್ತು ಗಾಳಿಪಟ

- ಯಲ್ಲಪ್ಪ

ಅಕ್ಕ....ಒಂದರ್ಥದಲ್ಲಿ ನೀನು
ಎರಡಾಗಿ ಮೂರಾದವಳು
ಅಷ್ಟೆಲ್ಲಾ ಬಣ್ಣದ ಮಾತೇಕೆ
ಊರಿನಲ್ಲೆಲ್ಲಾ ನೀನು 'ಮೂರೂ ಬಿಟ್ಟವಳು'

ನೆನ್ನೇ ಮೊನ್ನೆಯ ತನಕ
ನೀನು ಇಷ್ಟೇ ಉದ್ದ
ಲಂಗ ದಾವಣಿಗಳ ಚುಂಗಾಳಿ ಒಳಗೆ
ಮಣ್ಣ ಬೊಂಬೆಯಂತೆ
ಮುಟ್ಟಿದರೆ ಮೃದು, ಮುರಿದರೆ
ಹದಮೀರಿ, ಊರ ಹುಡುಗರ
ಕೈಯ ಉಗುರೆಲ್ಲಾ ಸೋಕಿ
ಕಿಟಾರನೆ ಕಿರುಚಿ
ಅಮ್ಮನ ಬಾಯಲ್ಲಿ 'ಕಿಲಾಡಿ'ಯಾದವಳು

ಅರ್ಧ ಅಳು ಮೋರೆ
ಅರ್ಧ ನಗು ಮೋರೆ
ಬಾಗಿಲ ಸಂದಿಯ ಪಡಸಾಲೆಗೆದುರು
ಮೈನೆರೆದು ಕೂತಾಗ
ತುಪ್ಪದ ಬಟ್ಟಲು, ಕೊಬ್ಬರಿ ಬಟ್ಟಲು
ಯಾವ ಬಟ್ಟಲಿನ ಆಸೆಗೆ
ತೊಟ್ಟಿಲು ಕಟ್ಟಿದೆ ಜಾಣೆ?
ನಿನ್ನ ನಾಲಗೆಯ ತೀಟೆಗೆ
ಅವು ಹಿಂಡಿ ಬೂಸಾ ಅಲ್ಲ ಕಣೆ!

೨

ಈಗ ಕೇರಿ ತುಂಬಾ
ಹೋರಿಗಳ ಸವಾರಿ
ಚಿಗುರು ಪೊಗರು ಮೀಸೆ
ಮಿಠಾಯಿ ಚಪ್ಪರಿಸುವ ನಾಲಗೆ ಮಸೆದು
ನಿನ್ನ ಗುಡಿಸಲ ಕಡೆಗೆ ಗುಟುರು ಹಾಕ್ಯಾರೆ
ಈಗ ನಿನ್ನ ಮುಂದಲೆ
ಅದಕ್ಕೇ ಅಮ್ಮನ ಕೈಯಲ್ಲಿ

ನೀನು ಬಣ್ಣದ ಚಿಟ್ಟೆಯ ಹಾಗೆ
ಹಾರಾಡ ಬಯಸುವೆಯಾದರೆ

ಈ ಊರ ತುಂಬಾ ತೋಟಗಳಿವೆ
ತೋಟದ ತುಂಬಾ ಹೂಗಳಿವೆ
ಒಂದೊಂದಕ್ಕೂ ದಟ್ಟಬೇಲಿ
ಮುಟ್ಟಲಾಗದ ಮುಳ್ಳಿನ ಕಿರೀಟ
ಮುಟ್ಟಬಾರದು ನೀನು ಮುಟ್ಟಾದವಳು
ಗುಟ್ಟಾಗಿ ಏನೇನೋ ಮಾತಾಡುತ್ತಾರೆ
ಊರೊಳಗೆ ನಿನ್ನ ಬಗ್ಗೆ.

ಅದಕ್ಕೆ...
ಅಮ್ಮ ನಿನ್ನ ರೆಕ್ಕೆ ಕತ್ತರಿಸುತ್ತಾಳೆ
ಲಂಗ ಕಳಚಿ, ದಾವಣಿ ಹೊದಿಸುತ್ತಾಳೆ
ಮೈನೆರೆದ ಹುಡುಗಿ ನೀನು
ಅಕ್ಕ ಹಾರಿ ಹೋಗೆ....

೩

ಹಾರಲಾಗದ ಬೇಲಿ
ಬಾಳಲಾರದ ಊರು
ಬಂಧನದ ಒಳಗಿರುವ ನಂದನದ ಹೂವಿಗೆ
ಮಧುಪ ಬರುವನೆ ಜಾಣ?
ಅಂಗಾಂಗದ ಒಳಗಿರುವ
ಸಂಗಮದ ಚೇತನಕೆ ಬಾನಗಲ
ದೂರ ದಿಗಂತಕೆ ಹೊಸ ದಾರಿ ಬೇಕು
ಹಾರಿ ಹೋಗುವ ಚಿಟ್ಟೆಗೆ ದಾರಿ ಹೇಳು.

೪

ಉದ್ದುದ್ದ ಉಗುರು ಬೆಳೆದು
ದಾಡೆಗಳ ಮಸೆದು, ಸೊಂಟಕ್ಕೆ
ಬಿಗಿದಿದ್ದ ನಂಟಿನ ದಾರಗಳ ಕಡಿದು
ಸೂತ್ರ ಹೊಸೆದು ಹಾರಿಯೇ ಬಿಟ್ಟಳು ಅಕ್ಕ
ಗಾಳಿಯಲೆಯಲಿ ಗಾಳಿಪಟವಾಗಿ

ಅಕ್ಕನ "ಹುಣ್ಣಿಮೆ ಚಂದಿರನ ಹೆಣಾ ಬಂತೊ
ಮುಗಿಲಾಗ ತೇಲತ ಹಗಲಾ"
ಈಗಲೂ ತಮ್ಮನ ಅಳುವಿನ ಸದ್ದು
ತಮ್ಮನನ್ನು ಸಂತೈಸಲು ಬರುವ
ಅಕ್ಕನ ಗಾಳಿಪಟದ ಚಿತ್ರ
ಕೇರಿಯವರಿಗೆಲ್ಲಾ ಕಾಣುತ್ತದೆ!

ಸ್ತನಾರ್ಬುದ (ಸ್ತನ ಕ್ಯಾನ್ಸರ್)

ಡಾ|| ವಸುಂಧರಾ ಭೂಪತಿ

12 ನವೆಂಬರ್ 1998ರವರೆಗೆ ಸಹಜ ಜೀವನ ನಡೆಸುತ್ತ ವಕೀಲಿ ವೃತ್ತಿ ಹಾಗೂ ಎರಡು ಮಕ್ಕಳ ಸಂಸಾರ ಎರಡರಲ್ಲೂ ಸಂಪೂರ್ಣವಾಗಿ ತೊಡಗಿಸಿಕೊಂಡು ನೆಮ್ಮದಿ, ಸಂತಸದಿಂದ ಬದುಕುತ್ತಿದ್ದ ಅರುಣಳಿಗೆ ಬರಸಿಡಿಲಿನಂತೆ ಬಂದೆರಗಿತ್ತು ಸ್ತನಕ್ಯಾನ್ಸರ್. ಅಂದಿನಿಂದ ಅವಳ ಬದುಕೇ ದುರ್ಭರವಾಯಿತು. ಆಸ್ಪತ್ರೆಯಿಂದ ಆಸ್ಪತ್ರೆಗೆ, ವೈದ್ಯರಲ್ಲಿ ಅಲೆದಾಡುತ್ತ ಸ್ತನವನ್ನು ತಾನು ಕಳೆದುಕೊಳ್ಳಬೇಕಾಗುತ್ತದೆಂದು ತಿಳಿದು ಬಂದಾಗ ಅವಳ ಸ್ಥಿತಿ ಅತ್ಯಂತ ಶೋಚನೀಯ. ಬದುಕು ಅತ್ಯಂತ ಅಮೂಲ್ಯವೆಂದು ಅದಕ್ಕಾಗಿ ಸ್ತನ ಕಳೆದುಕೊಂಡರೂ ಪರವಾಗಿಲ್ಲ ಎಂದು ಧೈರ್ಯದಿಂದ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಳು. ಶಸ್ತ್ರಚಿಕಿತ್ಸೆಯ ನಂತರ ಅವಳ ದೈಹಿಕ ಹಾಗೂ ಮಾನಸಿಕ ಸ್ಥಿತಿಯಲ್ಲಿ ಏರುಪೇರು ಉಂಟಾಯಿತು. ಬದುಕಿನ ಬಗ್ಗೆ ಆಸಕ್ತಿ ಹೊರಟುಹೋಯಿತು. ತಲೆ ಎತ್ತಿ ತಿರುಗಾಡಲು ಸಂಕೋಚ ಗಂಡನ ಬಗ್ಗೆ ಅನುಮಾನ. ತನ್ನನ್ನು ಮೊದಲಿನಂತೆ ಪ್ರೀತಿಸುತ್ತಿಲ್ಲ ಹಾಗೂ ಬೇರೆ ಹೆಣ್ಣಿನೊಡನೆ ಸಂಪರ್ಕ ಹೊಂದಿರಬಹುದೆಂದು ಸಂಶಯ, ಆತಂಕದಲ್ಲೇ ದಿನ ದೂಡುತ್ತಾಳೆ. ಹೀಗಾಗಲು ಕಾರಣವೇನು? ಅವಳು ವಿದ್ಯಾವಂತೆಯಾಗಿದ್ದು ತನ್ನ ಕೈಯಾರೆ ತಾನೇ ಹೂವಿನಂತಹ ಜೀವನವನ್ನು ಹಾಳು ಮಾಡಿಕೊಂಡಿದ್ದೇಕೆ? ಆಗಾಗ್ಗೆ ತನ್ನ ದೇಹವನ್ನು ಅದರಲ್ಲೂ ಸ್ತನಗಳನ್ನು ಪರೀಕ್ಷಿಸಿಕೊಳ್ಳುತ್ತಿದ್ದರೆ ಸ್ವಲ್ಪ ಬದಲಾವಣೆ ಕಂಡುಬಂದಿದ್ದರೂ ತಕ್ಷಣ ಅರಿವಾಗುತ್ತಿತ್ತು. ಆಗ ತಕ್ಷಣ ವೈದ್ಯರನ್ನು ಭೇಟಿಯಾಗಿದ್ದರೆ ಗಡ್ಡೆ ಕ್ಯಾನ್ಸರಿಗೆ ತಿರುಗುವ ಮುಂಚೆಯೇ ಚಿಕಿತ್ಸೆ ತೆಗೆದುಕೊಂಡಿದ್ದರೆ ಎಲ್ಲರಂತೆ ಅವಳೂ ಜೀವನ ನಡೆಸಬಹುದಿತ್ತಲ್ಲವೆ? ಆದ್ದರಿಂದ ಪ್ರತಿಯೊಬ್ಬ ಮಹಿಳೆಯೂ ತಮ್ಮೆಲ್ಲ ಕೆಲಸದ ಒತ್ತಡದ ನಡುವೆಯೂ ತಮಗಾಗಿ ಸ್ವಲ್ಪ ಸಮಯವನ್ನು ಮೀಸಲಿಟ್ಟುಕೊಳ್ಳಬೇಕು. ತಿಂಗಳಿಗೊಂದು ಬಾರಿಯಾದರೂ ಸ್ವಯಂಸ್ತನ ಪರೀಕ್ಷೆ ಮಾಡಿಕೊಳ್ಳುತ್ತಿರಬೇಕು. ಚಿಕ್ಕ ಗಡ್ಡೆಯಂತಹವೇನಾದ್ರೂ ಕಂಡುಬಂದರೆ ತಕ್ಷಣ ವೈದ್ಯರ ಬಳಿಗೆ ಹೋಗಬೇಕು. ನಾಚಿಕೆ, ಸಂಕೋಚ ಪಟ್ಟುಕೊಂಡರೆ ತಮ್ಮ ಜೀವನವನ್ನೇ ಕಳೆದುಕೊಳ್ಳಬೇಕಾಗುತ್ತದೆ.

ಸ್ತನಕ್ಯಾನ್ಸರ್‌ಗೆ ಕಾರಣಗಳು, ಲಕ್ಷಣಗಳು ಸ್ವಯಂ ಪರೀಕ್ಷೆ ಮಾಡಿಕೊಳ್ಳುವ ವಿಧಾನ ಹಾಗೂ ಚಿಕಿತ್ಸೆಯ ಬಗ್ಗೆ ಸಂಪೂರ್ಣ ವಿವರಗಳನ್ನು ತಿಳಿದುಕೊಳ್ಳಬೇಕಾಗುದುದು ಪ್ರತಿಯೊಬ್ಬ ಮಹಿಳೆಗೆ ಅತ್ಯಂತ ಅವಶ್ಯಕ.

ಅಮೇರಿಕಾದ ಮಹಿಳೆಯರಲ್ಲಿ ಪ್ರತಿವರ್ಷ ಸುಮಾರು ಒಂದು ಲಕ್ಷ ಹೊಸದಾಗಿ ಸ್ತನಕ್ಯಾನ್ಸರ್‌ಗಳಾಗುವ ಸಾಧ್ಯತೆಗಳಿರುತ್ತದೆನ್ನಲಾಗಿದೆ. ಅಲ್ಲಿಯ ಪ್ರತಿ ಹದಿನಾಲ್ಕು ಮಹಿಳೆಯರಲ್ಲೊಬ್ಬರಿಗೆ ಅವರ ಜೀವಮಾನದಲ್ಲಿ ಸ್ತನದ ಕ್ಯಾನ್ಸರ್ ಆಗಬಹುದೆಂದು ಕೂಡ ಅಂದಾಜು ಮಾಡಲಾಗಿದೆ. ಏಷ್ಯಾ ಮತ್ತು ಆಫ್ರಿಕಾದ ಜನರಲ್ಲಿ ಅಷ್ಟು ಹೆಚ್ಚಿನ ಪ್ರಮಾಣದಲ್ಲಿ ಸ್ತನದ ಕ್ಯಾನ್ಸರ್ ಕಂಡು ಬರುವುದಿಲ್ಲ. ಭಾರತದಲ್ಲಿ ಸಾವಿರದಲ್ಲೊಬ್ಬ ಮಹಿಳೆ ಸ್ತನ ಕ್ಯಾನ್ಸರ್‌ಗೊಳಗಾಗ ಬಹುದೆಂದು ಅಂದಾಜಿದೆ. ಆದರೆ ಪಾರ್ಸಿ ಮತ್ತು ಸಿಂಧೀ ಮಹಿಳೆಯರಲ್ಲಿ ಸ್ತನ ಕ್ಯಾನ್ಸರಿನ ಪ್ರಮಾಣ ಹೆಚ್ಚಾಗಿರುತ್ತದೆಂದು ಒಂದು ಸಮೀಕ್ಷೆಯಿಂದ ತಿಳಿದುಬಂದಿದೆ. ಗರ್ಭಕೋಶದ ಕ್ಯಾನ್ಸರಿನ ನಂತರದ ಸ್ಥಾನ ಸ್ತನ ಕ್ಯಾನ್ಸರಿನದಾಗಿದೆ. ಸಮಾಜದ ಶ್ರೀಮಂತ ಸಮುದಾಯದಲ್ಲೇ ಇದು ಹೆಚ್ಚಾಗಿ ಕಂಡುಬರುತ್ತವೆ. ಹೆಚ್ಚು ಕೊಬ್ಬಿನಂಶವುಳ್ಳ ಆಹಾರ ಪದಾರ್ಥಗಳ ಸೇವನೆ ಸ್ತನದ ಕ್ಯಾನ್ಸರ್ ಉತ್ಪತ್ತಿಯಾಗಲು ಕಾರಣವಾಗುತ್ತವೆ. ದೇಹದೊಳಗಿನ ಕೆಲವು ಜೈವಿಕ ಮತ್ತು ಹಾರ್ಮೋನು ವ್ಯವಸ್ಥೆಗಳ ಪರಸ್ಪರ ಪ್ರಕ್ರಿಯೆಗಳ ಏರಿಳಿತಗಳ ಪರಿಣಾಮದಿಂದ ಹಾಗೂ ಇತರ ಸೋದರ ಸಂಬಂಧಿಗಳಲ್ಲಿ ಸ್ತನದ ಕ್ಯಾನ್ಸರ್ ಆಗಿದ್ದರೆ, ಮುಂದಿನ ಪೀಳಿಗೆಯವರಲ್ಲಿ ಈ ಕ್ಯಾನ್ಸರ್ ಆಗುವ ಸಂಭವ ಇತರರಿಗಿಂತ ಎರಡುಪಟ್ಟು ಅಧಿಕ. ಎರಡೂ ಸ್ತನಗಳಲ್ಲಿ ಕ್ಯಾನ್ಸರ್ ಆದವರ ಹಾಗೂ ಮುಟ್ಟುನಿಲ್ಲುವ ಮೊದಲೇ ಕ್ಯಾನ್ಸರ್ ಆದವರ ಮುಂದಿನ ಪೀಳಿಗೆಯವರಲ್ಲಿ ಕ್ಯಾನ್ಸರ್‌ನ ಸಂಭವ ಹೆಚ್ಚಾಗಿರುತ್ತದೆ.

ಹನ್ನೊಂದು ವರ್ಷಕ್ಕಿಂತ ಮೊದಲೇ ಋತುಮತಿಯಾದವರು ಹಾಗೂ 50 ವರ್ಷಗಳ ನಂತರ ಮುಟ್ಟು ನಿಂತವರಲ್ಲಿ ಸ್ತನ ಕ್ಯಾನ್ಸರ್ ಉದ್ಭವಿಸುವ ಸಾಧ್ಯತೆಗಳು ಅಧಿಕ. ಇದಕ್ಕೆ ವಯಸ್ಸಿನ ಇತಿಮಿತಿಗಳಿಲ್ಲ. ಪಾಶ್ಚಿಮಾತ್ಯ ದೇಶಗಳ ಮಹಿಳೆಯರಲ್ಲಿ 50-70 ವರ್ಷ ವಯಸ್ಸಿನವರಲ್ಲಿ ಕಾಣಿಸಿಕೊಂಡರೆ ಭಾರತದ ಮಹಿಳೆಯರಲ್ಲಿ 30 ರಿಂದ 55 ವರ್ಷದ ಅಂತರದವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. 40 ವರ್ಷ ವಯಸ್ಸಿನವರಲ್ಲಿ ಶೇಕಡಾ 80 ರಷ್ಟು ಸಾಧ್ಯತೆ ಇರುತ್ತದೆ. ಮದುವೆಯಾದ ಸ್ತ್ರೀಯರು, ಮದುವೆಯಾದರೂ ಮಕ್ಕಳಾಗದವರು, ತಡವಾಗಿ ಮಕ್ಕಳಾದವರು, ಒಂದೇ ಮಗು ಇರುವವರಲ್ಲೂ ಇದರ ಸಂಭವ ಅಧಿಕ. ಮಕ್ಕಳಿಗೆ ಹಾಲುಡಿಸದವರಲ್ಲಿಯೂ ಸ್ತನದ ಕ್ಯಾನ್ಸರ್ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

ಚರ್ಮದಲ್ಲಿರುವ ಬೆವರಿನ ಗ್ರಂಥಿಗಳೇ ಹಾಲು ಸ್ರವಿಸುವ ಗ್ರಂಥಿಗಳಾಗಿ ಮಾರ್ಪಾಡಾಗಿವೆ. ಹೀಗೆ ಮಾರ್ಪಾಡಾದ ಸಾವಿರಾರು ಹಿರಿಕಿರಿಯ ಗ್ರಂಥಿಗಳು ಗುಂಪುಗುಂಪಾಗಿ ಸ್ತನದ ಹಾಲೆಗಳಾಗುತ್ತವೆ. ಹಾಲೆಗಳಿಂದ ಉದ್ಭವವಾಗುವ ನಾಳಗಳು ಒಂದುಗೂಡಿ ಮೊಲೆಯ ತೊಟ್ಟಿನಲ್ಲಿ ಬಾಯಿ ತೆರೆದುಕೊಳ್ಳುತ್ತವೆ. ಮಗುವಿಗಾಗಿ ಹಾಲು ಉತ್ಪಾದಿಸುವ ಉದ್ದೇಶ ಇವುಗಳದಾದರೂ ಸ್ತ್ರೀಯರ ಲೈಂಗಿಕ ಅಂಗಗಳ ಜಾಲದಲ್ಲಿ ಸ್ತನಗಳಿಗೆ ಮುಖ್ಯವಾದ ಸ್ಥಾನವಿದೆ.

ಸ್ತನಗಳ ಬೆಳವಣಿಗೆ, ಕಾರ್ಯವಿಧಾನ ಮತ್ತು ರಿಗ್ರೆಶನ್‌ಗಳಿಗೆ ಲೈಂಗಿಕ ಹಾರ್ಮೋನುಗಳ ನೇರ ಸಂಬಂಧವಿರುತ್ತದೆ. ಬಾಲಕಿ ಯೌವನಾವಸ್ಥೆಗೆ ಕಾಲಿಡುವಷ್ಟರಲ್ಲಿ ಈಸ್ಟ್ರೋಜೆನ್ ಹಾರ್ಮೋನು ಪ್ರಭಾವದಿಂದ ಸ್ತನಗಳು ಆಕಾರ ಮತ್ತು ಗಾತ್ರದಲ್ಲಿ ದೊಡ್ಡದಾಗುವಂತೆ ಮಾಡುತ್ತದೆ. ಗರ್ಭಾವಸ್ಥೆಯ ಸಮಯದಲ್ಲಿ ಪ್ರೊಲ್ಯಾಕ್ಟಿನ್ ಸ್ತನಗಳಲ್ಲಿ ಹಾಲು ಸ್ರವಿಸುವ ತಯಾರಿಗೆ ಪ್ರಚೋದನೆ ನೀಡುತ್ತದೆ. ಮುಂದೆ ಬೆಪಿಜನಕ ಹಾರ್ಮೋನು ಸ್ರವಿಕೆಯಾಗುತ್ತಿರುವ ಹಾಲು ಬತ್ತಿಹೋಗುವಂತೆ ಮಾಡುತ್ತದೆ. ಹೀಗೆ ಯೌವನಾವಸ್ಥೆ, ಗರ್ಭಾವಸ್ಥೆ, ಬಾಣಂತನ, ಹಾಲೂಡಿಸುವಿಕೆ ಮತ್ತು ಕೊನೆಯದಾಗಿ ರಜೋನಿವೃತ್ತಿಯ ಸಂದರ್ಭಗಳಲ್ಲಿ ಈ ಹಾರ್ಮೋನುಗಳ ಪರಸ್ಪರ ಪ್ರತಿಕ್ರಿಯಿಸುತ್ತವೆ. ಬಹುಶಃ ಗರ್ಭಾಶಯವನ್ನು ಹೊರತುಪಡಿಸಿದರೆ ದೇಹದ ಇನ್ನಾವ ಅವಯವದಲ್ಲೂ ಇಷ್ಟು ತೀವ್ರವಾಗಿ ಜೈವಿಕ ಬದಲಾವಣೆಯಾಗುವುದಿಲ್ಲ. ಈ ರೀತಿಯ ವ್ಯತ್ಯಾಸವಾಗುವುದು ಸಹಜವೆನ್ನಬಹುದಾದರೂ ಸ್ತನಗಳಲ್ಲಿ ಉಂಟಾಗುವ ವಿವಿಧ ರೀತಿಯ ಗೆಡ್ಡೆಗಳು, ಕ್ಯಾನ್ಸರ್ ಮುಂತಾದ ವ್ಯಾಧಿಗಳಿಗೆ ಈ ಪ್ರಕ್ರಿಯೆಯೇ ಕಾರಣವಾಗುತ್ತವೆಂಬುದೂ ಸಹ ನಿಜ. ಸ್ತನಗಳಲ್ಲಿ ಉಂಟಾಗುವ ಅಪಾಯಕಾರಿಯಲ್ಲದ ಮ್ಯಾಮರಿಡಿಸ್ ಪ್ಲೇಸಿಯಾ, ಸಿಸ್ಟಿಕ್ ಹೈಪರ್‌ಪ್ಲೇಸಿಯಾ, ಮ್ಯಾಮರಿಡಕ್ಟೇಟಿಕ್‌ಟೇಸಿಯಾ, ಫೈಬ್ರೋಲಿಡಿನೋಮ, ಸಿಸ್ಟೋ ಸಾರ್ಕೋಮಾಗಳಂತಹ ಗಡ್ಡೆಗಳಲ್ಲಿ ಈ ಹಾರ್ಮೋನುಗಳ ಪ್ರಭಾವವಿದ್ದೇ ದಶಕ ದಶಕಗಳಿಂದ ಯಾವ ಹಾರ್ಮೋನು ಸ್ತ್ರೀಯ ಸ್ತನ ಹಾಗೂ ಗರ್ಭಾಶಯಗಳನ್ನು ಪಾಲಿಸಿ ಪೋಷಿಸಿತ್ತೋ ಅವೇ ಹಾರ್ಮೋನು ಮುಂದೆ ಅವರಲ್ಲಿ ಕ್ಯಾನ್ಸರಿನ ಬೆಳವಣಿಗೆಗೆ ಕಾರಣವಾಗುತ್ತವೆನ್ನುವುದು ನಿಜಕ್ಕೂ ವಿಪರ್ಯಾಸದ ಸಂಗತಿ.

ಹಾಲು ಸ್ರವಿಸುವ ಗ್ರಂಥಿಗಳ ಒಳಪರೆ, ಹಾಲಿನ, ಸಾಗುನಾಳ ಹಾಗೂ ಮೊಲೆತೊಟ್ಟಿನ ನಾಳಗಳಾಗಿ ಜೀವಕೋಶಗಳಲ್ಲಾಗುವ ಬದಲಾವಣೆಗಳಿಂದ ವಿವಿಧ ರೀತಿಯ ಕ್ಯಾನ್ಸರ್‌ಗಳು ಉದ್ಭವವಾಗುತ್ತದೆ. ಅವುಗಳ ಬೆಳವಣಿಗೆಯ ಗತಿ, ಗಾತ್ರ, ಹರಡುವಿಕೆ ಇತ್ಯಾದಿಗಳು ಒಂದಕ್ಕಿಂತ ಒಂದು ವಿಭಿನ್ನವಾಗಿರುತ್ತವೆ. ಕೆಲವು ಪ್ರಾರಂಭದಿಂದಲೂ ಅತ್ಯಂತ ನಿಧಾನಗತಿಯಲ್ಲಿ ಬೆಳವಣಿಗೆ ಆಗುತ್ತವೆ. ಅವುಗಳ ಸಂಪೂರ್ಣ ಪರಿಣಾಮ ಪ್ರಕಟವಾಗುವುದಕ್ಕೆ ಕೆಲವು ವರ್ಷಗಳೇ ಬೇಕಾಗಬಹುದು. ಇನ್ನು ಕೆಲವು ಪ್ರಾರಂಭವಾದ ಕೆಲವೇ ತಿಂಗಳುಗಳಲ್ಲಿ ಅತ್ಯಂತ ತೀವ್ರಗತಿಯಲ್ಲಿ ಬೆಳವಣಿಗೆ ಹೊಂದಿ ದೂರದ ಅವಯವಗಳಿಗೂ ಹರಡಿ ಕೂಡಲೇ ಮಾರಕ ಪರಿಣಾಮ ಉಂಟುಮಾಡುತ್ತವೆ. ಗರ್ಭಿಣಿ ಮತ್ತು ಬಾಣಂತಿಯರಲ್ಲಿ ಈ ರೀತಿಯ ಕ್ಯಾನ್ಸರ್‌ಗಳು ಹೆಚ್ಚಾಗಿ ಉಂಟಾಗುತ್ತವೆ. ಸ್ತನದಲ್ಲಿ ಉದ್ಭವಿಸುವ ಬಹುಪಾಲು ಗೆಡ್ಡೆಗಳು ಹಲವಾರು ತಿಂಗಳುಗಳು ಸದ್ದು ಗದ್ದಲವಿಲ್ಲದೇ ಮೊಳಕೆಯೊಡೆದು ಬೆಳೆಯುತ್ತಿರುತ್ತವೆ. ಅವು ಕೈಗೆ ಸಿಗುವಷ್ಟು ಗಾತ್ರವನ್ನು ತಲುಪುವಷ್ಟರಲ್ಲಿ ಆರೇಳು ತಿಂಗಳು ಕಳೆದುಹೋಗಿರುತ್ತದೆ. ಆರಂಭದ ಹಂತದಲ್ಲಿ ಅವುಗಳಲ್ಲಿ ನೋವು ಸಹ ಇರುವುದಿಲ್ಲ. ಆದ್ದರಿಂದ ಬಹಳಷ್ಟು ಸ್ತ್ರೀಯರು ಇದರ ಬಗ್ಗೆ ಲಕ್ಷಿಸುವುದಿಲ್ಲ.

ಸ್ತನದಲ್ಲಿ ಬಿರುಸಾದ ಗಂಟಿನ ತರಹದ ಗೆಡ್ಡೆಯ ಬೆಳವಣಿಗೆಯಾಗುತ್ತದೆ. ಅದು ಕ್ರಮೇಣ ದೊಡ್ಡದಾಗಿ ಬೆಳೆಯುತ್ತ ಸ್ತನದ ಒಂದು ಭಾಗದಲ್ಲಿ ಬಹಳವಾಗಿ ಮೇಲ್ಗಡೆ ಹೊರಪಕ್ಕದ ಕಾಲು ಭಾಗದಲ್ಲಿಯೇ ಕಾಣಿಸಿಕೊಳ್ಳುತ್ತದೆ. ಅದರ ಬೆಳವಣಿಗೆಯನ್ನು ನಾಲ್ಕು ಹಂತಗಳಲ್ಲಿ ಗುರುತಿಸಬಹುದು. ಪ್ರಥಮ ಹಂತದಲ್ಲಿ ಗೆಡ್ಡೆ ಸ್ತನದ ಗ್ರಂಥಿಯ ಊತಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಈ ಹಂತದಲ್ಲಿ ಅದು ಸ್ತನದ ಚರ್ಮ ಅಥವಾ ಸುತ್ತಲಿನ ಅಂಗಾಂಗಗಳಿಗೆ ಪ್ರಸರಿಸಿ ಅಂಟಿಕೊಂಡಿರುವುದಿಲ್ಲ. ಯಾವ ಕಡೆಗೆ ಬೇಕಾದರೂ ಚಲಿಸಲು ಸಾಧ್ಯವಾಗುತ್ತವೆ. ಎರಡನೆ ಹಂತದಲ್ಲಿ ಗಾತ್ರದಲ್ಲಿ ಸ್ವಲ್ಪ ದೊಡ್ಡದಾಗುತ್ತವೆ. ಚಲನೆ ಸ್ವಲ್ಪಮಟ್ಟಿಗೆ ಮಿತಿಯಲ್ಲಿರುತ್ತದೆ. ಗುರುತಿಸಲು ಸಾಧ್ಯವಾಗುತ್ತದೆ. ಬಿಡಿ ಬಿಡಿಯಾಗಿದ್ದು ಅತ್ತಿಂದಿತ್ತ ಚಲಿಸಲು ಸಾಧ್ಯವಾಗುತ್ತದೆ. ಮೂರನೇ ಹಂತಕ್ಕೆ ಬರುವುದರೊಳಗೆ ಸ್ತನದಲ್ಲಿನ ಗೆಡ್ಡೆಯ ಗಾತ್ರ ಬಹಳಷ್ಟು ದೊಡ್ಡದಾಗಿದ್ದು ಚರ್ಮ ಮತ್ತು ಸುತ್ತಲಿನ ಅಂಗಾಂಗಗಳಿಗೆ ಅಂಟಿಕೊಂಡಿರುತ್ತದೆ. ಕೆಳಗೆ ಎದೆಗೂಡಿದ ಮಾಂಸಖಂಡಕ್ಕೆ ಅಂಟಿಕೊಂಡು ಅದರ ಚಲನೆ ಸೀಮಿತಗೊಂಡಿರುತ್ತದೆ. ಚರ್ಮಕ್ಕೆ ಅದರ ಕಬಂಧ ಬಾಹುಗಳು ಚಾಚಿದ್ದು ಚರ್ಮದ ಮೇಲ್ಮೈನ ಪದರಗಳು ಬಿರಿದುಕೊಳ್ಳುತ್ತವೆ. ಅದರಿಂದ ಚರ್ಮದಲ್ಲಿನ ರಂಧ್ರಗಳ ಬಾಯಿ ಅಗಲವಾಗಿ ತೆರೆದುಕೊಳ್ಳುವಂತಾಗುತ್ತವೆ. ಚರ್ಮ ಹೊರನೋಟಕ್ಕೆ ಕಿತ್ತಲೆ ಹಣ್ಣಿನ ಮೇಲ್ಮೈಯಲ್ಲಿರುವಂತೆ ಸಣ್ಣಸಣ್ಣ ಗುಳ್ಳೆಗಳ ಹಾಗೆ ಕಾಣಿಸುತ್ತದೆ. ಮೊಲೆತೊಟ್ಟು ಹಿಂದೆ

ಸರಿದುಕೊಂಡಿರುತ್ತದೆ. ಈ ಹಂತದಲ್ಲಿ ಗೆಡ್ಡೆಯಲ್ಲಿ ಸ್ವಲ್ಪಮಟ್ಟಿನ ನೋವು ಸಹ ಇರುತ್ತದೆ. ನಾಲ್ಕನೆಯ ಅಥವಾ ಕೊನೆಯ ಹಂತದಲ್ಲಿ ಈ ತನಕ ವಿವರಿಸಿದ ಮೂರು ಹಂತಗಳ ಲಕ್ಷಣಗಳೊಂದಿಗೆ ಗೆಡ್ಡೆ ಒಡೆದುಕೊಂಡು ಗಾಯವಾಗಿ ರಕ್ತ ಸುರಿಯಲಾರಂಭಿಸಬಹುದು. ದುರ್ಗಂಧವಾದ ಕೀವು ಕೂಡ ಬರುತ್ತಿರಬಹುದು. ಎಲ್ಲಕ್ಕಿಂತ ಮಿಗಿಲಾಗಿ ಕಂಕುಳಿನ ಗೆಡ್ಡೆಗಳು ಸಹ ದೊಡ್ಡದಾಗಿ ಬೆಳೆದು ಒಂದಕ್ಕೊಂದು ಅಂಟಿಕೊಂಡಿರಬಹುದು. ಕ್ಯಾನ್ಸರ್ ಕೋಶಗಳು ಯತ್ಕೃತ್ತು ಶ್ವಾಸಕೋಶ ಮೂಳೆ ಮುಂತಾದ ದೂರದ ಅಂಗಗಳಿಗೆ ಹರಡಿರುವ ಲಕ್ಷಣಗಳು ಪ್ರಕಟವಾಗಿರುತ್ತವೆ. ಕ್ಯಾನ್ಸರ್ ಬೆಳವಣಿಗೆ ಎರಡನೆ ಹಂತದಿಂದ ಮುಂದುವರಿದಾಗ ಯಾವುದೇ ಚಿಕಿತ್ಸಾ ವಿಧಾನವನ್ನು ಅನುಸರಿಸಿದರೂ ರೋಗಿ ಚೇತರಿಸಿಕೊಳ್ಳುವ ಸಂಭವ ಕಡಿಮೆ. ಸ್ತನದ ಕ್ಯಾನ್ಸರ್ ಕೋಶಗಳು ಸಾಮಾನ್ಯವಾಗಿ ಕಂಕುಳಿನಲ್ಲಿರುವ ಹಾಲ್ರಸ ಗ್ರಂಥಿಗಳಿಗೆ (Lyuph glands) ಮೊದಲು ಪ್ರಸರಿಸುತ್ತವೆ. ಮುಂದುವರಿದ ಪ್ರಕರಣದಲ್ಲಿ ಕಂಕುಳಿನ ಗೆಡ್ಡೆಯನ್ನು ಸ್ತನದ ಕ್ಯಾನ್ಸರ್ ಬೆಳವಣಿಗೆಯ ಜೊತೆಗೇ ಶಸ್ತ್ರಕ್ರಿಯೆಯಿಂದ ತೆಗೆಯಬೇಕಾಗುತ್ತದೆ. ಕ್ಯಾನ್ಸರ್ ಇರುವ ಭಾಗದ ಕುತ್ತಿಗೆಯ ಹಾಲ್ರಸ ಗ್ರಂಥಿಗಳಿಗೂ ಅವು ಪ್ರಸರಿಸುವುದು ಉಂಟು. ನಂತರ ದೂರದ ಯತ್ಕೃತ್ತು ಶ್ವಾಸಕೋಶ ಮುಂತಾದ ಅವಯವಗಳಿಗೂ ಪ್ರಸರಿಸುತ್ತವೆ.

ಬಾಹ್ಯ ಪರೀಕ್ಷೆ : ಸ್ತನದ ಯಾವುದೇ ಗೆಡ್ಡೆಯನ್ನು ಪತ್ತೆ ಹಚ್ಚುವುದರಲ್ಲಿ ವಿವರವಾದ ಬಾಹ್ಯ ಪರೀಕ್ಷೆಗಳು ಅವಶ್ಯಕ. ಸ್ತನಗಳನ್ನು ಸ್ಪರ್ಶಿಸಿ ಬಾಹ್ಯ ಪರೀಕ್ಷೆ ನಡೆಸುವಾಗ ರೋಗಿ ಮತ್ತು ವೈದ್ಯರಿಬ್ಬರಿಗೂ ಮುಜುಗರ ಉಂಟಾಗುವುದು ಸಹಜ. ಸ್ತ್ರೀಯನ್ನು ಕುಳ್ಳಿರಿಸಿ, ಮಲಗಿಸಿ ಸ್ತನ ಮತ್ತು ಅದರಲ್ಲಿನ ಗೆಡ್ಡೆಯನ್ನು ಸ್ಪರ್ಶಿಸಿ ವಿವಿಧ ರೀತಿಯಲ್ಲಿ ಗೆಡ್ಡೆ ಚಲಿಸುತ್ತ ಪರೀಕ್ಷಿಸಬೇಕಾಗುತ್ತದೆ. ಕುಳಿತಿರುವಾಗ, ಎರಡೂ ಕೈಗಳನ್ನು ಮೇಲೆತ್ತಿ ಹಿಡಿದಾಗ, ನಂತರ ಅವುಗಳನ್ನು ಸೊಂಟದ ಪಕ್ಕದಲ್ಲಿ ಬಿಗಿಯಾಗಿ ಒತ್ತಿಹಿಡಿದು ಕೊಂಡಾಗ ಸ್ತನಗಳ ಮತ್ತು ಮೊಲೆತೊಟ್ಟುಗಳ ಅಂತರದ ಮಟ್ಟಗಳ ವ್ಯತ್ಯಾಸ, ಅವುಗಳ ಚಲನೆ ಮುಂತಾದವುಗಳನ್ನು ಗಮನಿಸಬೇಕಾಗತ್ತದೆ. ಗೆಡ್ಡೆಯು ಮೆದುವಾಗಿದೆಯೋ, ಗಡುಸಾಗಿದೆಯೋ ಹಾಗೂ ಎಷ್ಟರಮಟ್ಟಿಗೆ ಚರ್ಮ ಮತ್ತು ಮಾಂಸಖಂಡಗಳಿಗೆ ಅಂಟಿಕೊಂಡಿದೆ ಎಂಬುದನ್ನು ಅರಿತುಕೊಳ್ಳಬೇಕಾಗುತ್ತದೆ. ಮೊಲೆತೊಟ್ಟಿನಿಂದ ತಿಳಿಯಾದ ದ್ರವ, ರಕ್ತ, ಕೀವು ಬರುತ್ತದೆಯೋ ಎಂಬುದನ್ನು ತಿಳಿಯಲು ಸ್ತನಗಳನ್ನು ಒತ್ತಿ ನೋಡಬೇಕಾಗುತ್ತದೆ. ಕಂಕುಳಲ್ಲಿ ಹಾಲ್ರಸ ಗ್ರಂಥಿಗಳ ಊತವನ್ನು ಗಮನಿಸಬೇಕಾಗುತ್ತವೆ. ಅದೇ ರೀತಿ ಕುತ್ತಿಗೆ, ನಾಭಿ ಪ್ರದೇಶಗಳನ್ನು ಸ್ಪರ್ಶಿಸಿ ಊತಗಳಿರುವ ಬಗೆಗೆ ತಿಳಿದುಕೊಳ್ಳ ಬೇಕಾಗುತ್ತದೆ. ಸ್ತ್ರೀ ನಾಚಿಕೆ, ಸಂಕೋಚಗಳಿಂದ ವೈದ್ಯರೊಡನೆ ಸಹಕರಿಸದಿದ್ದರೆ ಪರೀಕ್ಷೆಯನ್ನು ಸರಿಯಾಗಿ ಮಾಡಲು ಸಾಧ್ಯವಾಗುವುದಿಲ್ಲ. ಇಂತಹ ಪರೀಕ್ಷೆಗಳಿಂದ ಸ್ತನದ ಕ್ಯಾನ್ಸರ್‌ನ ಇರುವನ್ನು ತಿಳಿಯಬಹುದಾದರೂ ಖಚಿತಪಡಿಸಿಕೊಳ್ಳಲು ಕೆಲವು ಪರೀಕ್ಷೆಗಳನ್ನು ಮಾಡಿಸಬೇಕಾಗುತ್ತವೆ.

ಬಯಾಪ್ಸಿ : ಕಿರಿದಾದ ಗೆಡ್ಡೆ ಹಾಗೂ ಸಿಸ್ಟ್‌ಗಳನ್ನು ಸ್ಥಳೀಯ ಅರಿವಳಿಕೆ ನೀಡಿ ತೆಗೆದು ಬಯಾಪ್ಸಿ ಪರೀಕ್ಷೆಗೆ ಒಳಪಡಿಸಬಹುದು. ದೊಡ್ಡದಾಗಿರುವ ಹಾಗೂ ಸುತ್ತಲಿನ ಅಂಗಾಂಗಗಳಿಗೆ ಅಂಟಿ ಕೊಂಡಂತಿರುವ ಗೆಡ್ಡೆಯನ್ನ ಸಂಪೂರ್ಣವಾಗಿ ತೆಗೆದು ಪರೀಕ್ಷಿಸಲು ಸಾಧ್ಯವಾಗುವುದಿಲ್ಲ. ಸ್ಥಳೀಯ ಅರಿವಳಿಕೆಯ (ಲೋಕಲ್ ಅನೊಕ್ತಿಷಿಯಾ) ಸಹಾಯದಿಂದ ಅದರ ಒಂದು ತುಣುಕನ್ನು ಹೊರತೆಗೆದು ಪರೀಕ್ಷಿಸಬಹುದು. ಸ್ತನಕ್ಯಾನ್ಸರ್ ಅನುಮಾನವಿರುವ ಗೆಡ್ಡೆಯನ್ನು ಸಂಪೂರ್ಣವಾಗಿ ತೆಗೆಯುವ ಶಸ್ತ್ರಚಿಕಿತ್ಸೆ ನಡೆಸುತ್ತಿರುವಾಗಲೇ ಅದರ ತುಣುಕನ್ನು ತೆಗೆದು ತಕ್ಷಣ ಪರೀಕ್ಷೆಗೊಳಪಡಿಸುವ ಪದ್ಧತಿ (Frozen Section Biopsy) ಈಗ ಬಹಳ ಕಡೆ ಜಾರಿಯಲ್ಲಿದೆ. ಹಾಗೆ ತೆಗೆದ ತುಣುಕನ್ನು ಆಪರೇಷನ್ ಕೊಠಡಿಯ ಪಕ್ಕದಲ್ಲೇ ತಕ್ಷಣ ಪರೀಕ್ಷೆಗೊಳ ಪಡಿಸಲಾಗುತ್ತದೆ. ನುರಿತ ಪರಿಣಿತರು 15-20 ನಿಮಿಷಗಳಲ್ಲಿ ಅದರ ಫಲಿತಾಂಶವನ್ನು ನೀಡುತ್ತಾರೆ. ಫಲಿತಾಂಶಕ್ಕನುಸಾರ ಶಸ್ತ್ರಚಿಕಿತ್ಸೆ ಮಾಡಲು ಇದರಿಂದ ಅನುಕೂಲವಾಗುತ್ತದೆ. ಸಧ್ಯಕ್ಕೆ ಸ್ತನದಲ್ಲಿರುವ ಅತಿ ಚಿಕ್ಕ ಗೆಡ್ಡೆ, ಪೊಳ್ಳುಕೋಶದೊಳಗಡೆ ಇಂಜಕ್ಷನ್ನಗೆ ಬಳಸುವ ತರಹದ ಸೂಜಿಯನ್ನು ತೂರಿಸಿ ಅದರಿಂದ ಹೀರಿ ಎಳೆದು ತೆಗೆದ ರಸವನ್ನು ಪರೀಕ್ಷೆಗೊಳಪಡಿಸಿ (ಎಫ್.ಎನ್.ಎ.ಸಿ.) ರೋಗ ನಿರ್ಣಯ ಮಾಡುವ ಪದ್ಧತಿ ಇತ್ತೀಚಿನ ವರ್ಷಗಳಲ್ಲಿ ಜಾರಿಗೆ ಬಂದಿದೆ. ಇದರಿಂದ ಕೂಡ ಸುಲಭ ಹಾಗೂ ಶೀಘ್ರಗತಿಯ ರೋಗ ನಿರ್ಣಯ ಸಾಧ್ಯ ವಾಗುತ್ತದೆ.

ಮ್ಯಾಮೋಗ್ರಫಿ : ಸೌಮ್ಯ ರೀತಿಯ ಎಕ್ಸರ್ ಕಿರಣಗಳನ್ನು ಹೊರಸೂಸುವ ಯಂತ್ರದಿಂದ ಸ್ತನವನ್ನು ಪರೀಕ್ಷೆಗೊಳಪಡಿಸಲಾಗುತ್ತದೆ. ಸ್ತನದೊಳಗೆ ಇನ್ನೂ ಚಿಗುರೊಡೆಯುತ್ತಿರುವ ಅತಿ ಚಿಕ್ಕ ಗೆಡ್ಡೆಗಳನ್ನು ಸಹ ಈ ವಿಧಾನದಿಂದ ಪತ್ತೆ ಹಚ್ಚಬಹುದು. ಅಂತಹ ಅನುಮಾನ ಬಂದ ಕೂಡಲೇ ವಿವರವಾದ ಪರೀಕ್ಷೆಗೊಳಪಡಿಸಿ ಖಚಿತ ರೋಗನಿರ್ಣಯ ಮಾಡಬಹುದು.

ಸ್ವಯಂ ಸ್ತನ ಪರೀಕ್ಷೆ : ಮಹಿಳೆಯರು ತಮ್ಮ ಸ್ತನಗಳನ್ನು

ತಾವೇ ಆಗಾಗ್ಗೆ ಪರೀಕ್ಷೆ ಮಾಡಿಕೊಳ್ಳುವುದರಿಂದ ಪ್ರಾರಂಭದ ಹಂತದಲ್ಲಿರುವ ಕ್ಯಾನ್ಸರ್ ಮಾತ್ರವಲ್ಲ ಇತರ ಬದಲಾವಣೆಗಳನ್ನು ಪತ್ತೆ ಹಚ್ಚಲು ಸಾಧ್ಯವಿದೆ. ಸುಮಾರ 25-35 ವರ್ಷ ವಯಸ್ಸಿನ ನಂತರದ ಮಹಿಳೆಯರು ತಿಂಗಳಿಗೊಂದು ಬಾರಿಯಾದರೂ ತಮ್ಮ ಸ್ತನಗಳನ್ನು ಪರೀಕ್ಷಿಸಿಕೊಳ್ಳುವ ಅಭ್ಯಾಸವಿರಿಸಿಕೊಳ್ಳಬೇಕು. ಸಾಮಾನ್ಯವಾಗಿ ಮುಟ್ಟಾದ ನಂತರ ಸ್ವಯಂ ಪರೀಕ್ಷೆ ಮಾಡಿಕೊಳ್ಳುವುದರಿಂದ ಸ್ತನದಲ್ಲಿನ ವ್ಯತ್ಯಾಸಗಳು ಸುಲಭವಾಗಿ ಗೋಚರಿಸುತ್ತವೆ.

ಮೊದಲು ನಿಲುವುಗನ್ನಡಿ ಎದುರು ನಿಂತುಕೊಂಡು ಎರಡೂ ಕೈಗಳನ್ನು ಮೇಲೆತ್ತಿ, ನಂತರ ಪಕ್ಕದಲ್ಲಿ ಇಳಿಬಿಟ್ಟು, ಮುಂದೆ ಅವುಗಳನ್ನು ಸೊಂಟದ ಪಕ್ಕದಲ್ಲಿ ಒತ್ತಿ ಹಿಡಿದುಕೊಂಡು ಸ್ತನಗಳ ಗಾತ್ರ, ನಿಲುವು, ಊತವಿದೆಯೇ ಇಲ್ಲವೋ ಎಂಬುವನ್ನು ಮೊಲೆತೊಟ್ಟಿನ ಸ್ಥಿತಿ, ಚರ್ಮದಲ್ಲುಂಟಾಗಿರುವ ವ್ಯತ್ಯಾಸ ಮುಂತಾದವುಗಳನ್ನು ಗಮನಿಸಬೇಕು. ನಂತರ ಮೊಲೆಯನ್ನು ಒಂದು ಕ್ರಮದಲ್ಲಿ ಸ್ಪರ್ಶಿಸಿ, ಸ್ತನಗಳಲ್ಲಾಗಬಹುದಾದ ವ್ಯತ್ಯಾಸ ಗಮನಿಸಬಹುದು. ಸ್ನಾನ ಮಾಡುವಾಗಲೂ ಈ ತರಹದ ಪರೀಕ್ಷೆ ಮಾಡಿಕೊಳ್ಳಬಹುದು. ನಂತರ ಹಾಸಿಗೆಯಲ್ಲಿ ಮಲಗಿಕೊಂಡು ಸ್ವಯಂ ಪರೀಕ್ಷೆಯನ್ನು ಮುಂದುವರಿಸಬೇಕು. ಪರೀಕ್ಷಿಸುವ ಸ್ತನದ ಹಿಂಬದಿಯಲ್ಲಿ ಕಿರಿದಾದ ದಿಂಬನ್ನು ಇರಿಸಿಕೊಂಡರೆ ಒಳ್ಳೆಯದು. ನಿಂತುಕೊಂಡಾಗ ಮಾಡಿದಂತೆಯೇ ಸ್ತನವನ್ನು ಸ್ಪರ್ಶಿಸಿ ಬದಲಾವಣೆ ಯಾವ ಕಡೆಗಾಗಿದೆ ಎಂಬುದನ್ನು ಗುರುತಿಸಬಹುದು. ಈ ತರಗದ ಸ್ವಯಂ ಪರೀಕ್ಷೆಯಿಂದ ಸ್ತನದಲ್ಲಿ ಯಾವುದೇ ಅನುಮಾನಾಸ್ಪದ ಊತ, ಗೆಡ್ಡೆ ಕಂಡುಬಂದರೆ ಕೂಡಲೇ ವೈದ್ಯರ ಬಳಿ ತಪಾಸಣೆ ಮಾಡಿಸಿಕೊಳ್ಳಬೇಕು. ಹೀಗೆ ಸ್ವಯಂ ಸ್ತನ ಪರೀಕ್ಷೆ ಮಾಡಿಕೊಳ್ಳುವುದರಿಂದ ಆರಂಭದ ಹಂತದಲ್ಲೇ ಕ್ಯಾನ್ಸರನ್ನು ಪತ್ತೆಹಚ್ಚಲು ಸಾಧ್ಯವಾಗುತ್ತದೆ.

ಚಿಕಿತ್ಸೆ : ಎರಡನೆಯ ಹಂತ ತಲುಪಿರುವಂತಹವುಗಳನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದುಹಾಕಲು ಸಾಧ್ಯ. ಮುಂದುವರಿದ ಪರಿಸ್ಥಿತಿಗಳಿಗೆ ಶಸ್ತ್ರಚಿಕಿತ್ಸೆಯ ಜತೆಗೆ ವಿಕಿರಣ ಚಿಕಿತ್ಸೆ ಮತ್ತು ಕ್ಯಾನ್ಸರ್ ಮಾರಕ ಔಷಧಿಗಳ ಪ್ರಯೋಗ ಮಾಡಲಾಗುತ್ತದೆ.

ಈಗ ನೂರು ವರ್ಷಗಳ ಹಿಂದೆ ಅಮೆರಿಕಾದ ವಿಲಿಯಂ ಹಾಲ್‌ಸ್ಟೆಡ್ ಎಂಬ ಶಸ್ತ್ರಚಿಕಿತ್ಸಾ ತಜ್ಞರು ಇಡೀ ಸ್ತನವನ್ನು ವ್ಯಾಪಕವಾಗಿ ಕತ್ತರಿಸಿ ತೆಗೆಯುವುದರಿಂದ ಇದನ್ನು ಗುಣಪಡಿಸುವ ಸಾಧ್ಯತೆ ತೋರಿಸಿಕೊಟ್ಟರು. ಅವರು ಪ್ರತಿಪಾದಿಸಿದ ಸ್ತನ ಮತ್ತು ಅದರ ಸುತ್ತಮುತ್ತಲ ಎದೆಯ ಮಾಂಸಖಂಡಗಳು ಹಾಗೂ ಕಂಕುಳ ಹಾಲ್ರಸ ಗ್ರಂಥಿಗಳನ್ನು ಒಂದೇ ಬಾರಿಗೆ ವ್ಯಾಪಕವಾಗಿ ತೆಗೆದುಹಾಕುವ (Radical Mastectomy) ಬಹಳ ಕಾಲ ಪ್ರಚಾರದಲ್ಲಿತ್ತು. ಈ ವಿಧಾನದ ಆಚರಣೆಯಿಂದ ವ್ಯಕ್ತಿ ರೋಗದಿಂದ ಕೆಲಕಾಲ ಮುಕ್ತಳಾಗಿರುವುದು ಸಾಧ್ಯವಾಗುತ್ತಿದ್ದರೂ ಆಕೆ ಒಂದು ವಿಧದಲ್ಲಿ ಅಂಗವಿಕಲಳಾಗಿ ಬದುಕು ಸಾಗಿಸುವಂತಾಗುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಈ ವಿಧಾನದಲ್ಲಿ ಹಲವು ಮಾರ್ಪಡುಗಳಾಗಿರುವುದರಿಂದ ಚಿಕಿತ್ಸೆಯ ನಂತರದ ಪಾರ್ಶ್ವಪರಿಣಾಮಗಳನ್ನು ಮಿತಿಗೊಳಿಸಲು ಸಾಧ್ಯವಾಗುತ್ತಿದೆ. ಆರಂಭದ ಹಂತದಲ್ಲಿ ಗೆಡ್ಡೆ ಇರುವ ಚೌಕೋನ ಭಾಗವನ್ನು ಮಾತ್ರ ಕತ್ತರಿಸಿ ತೆಗೆಯುವ (Quadranecromy) ಇಲ್ಲವೇ ಸ್ತನವನ್ನು ಮಾತ್ರ ತೆಗೆಯುವ ವಿಧಾನ (Simple Maste-choury)ವಂತಹ ಸರಳ ವಿಧಾನಗಳು ಜಾರಿಗೆ ಬರುತ್ತಿವೆ. ಕಂಕುಳ ಗ್ರಂಥಿಗಳಿಗೆ ಹರಡಿರುವ ಸಂದರ್ಭದಲ್ಲಿ ಅದನ್ನೆ ಪ್ರತ್ಯೇಕವಾಗಿ ತೆಗೆದುಹಾಕಲಾಗುತ್ತವೆ. ಈ ತರಹದ ಚಿಕಿತ್ಸೆಯ ನಂತರ ಕ್ಯಾನ್ಸರ್ ಇದ್ದ ಭಾಗಕ್ಕೆ ವಿಕಿರಣ ಚಿಕಿತ್ಸೆಯನ್ನು ನೀಡಿ ಅಲ್ಲಿ ಉಳಿದು ಕೊಂಡಿರಬಹುದಾದ ಕ್ಯಾನ್ಸರ್ ಜೀವಕೋಶಗಳನ್ನು ನಾಶ ಮಾಡಲಾಗುತ್ತದೆ. ದೂರದ ಅಂಗಾಂಗಳಿಗೆ ಹರಡಿ ಕ್ಯಾನ್ಸರ್ ನೆಲಸಿದ್ದರೆ ಅದರ ವಿನಾಶಕ್ಕೆ ಔಷಧಿ ಚಿಕಿತ್ಸೆ ನೀಡಲಾಗುತ್ತದೆ. ಇವು ಅತ್ಯಂತ ಪ್ರಭಾವಶಾಲಿ ಔಷಧಿಗಳಾಗಿದ್ದರೂ ಪಾರ್ಶ್ವ ಪರಿಣಾಮಗಳಾಗುವ ಸಾಧ್ಯತೆಗಳಿರುವುದರಿಂದ ಇವುಗಳ ಪ್ರಯೋಗವನ್ನು ಮಿತವಾಗಿ ಎಚ್ಚರದಿಂದ ಮಾಡಬೇಕಾಗುತ್ತದೆ.

ಹಾರ್ಮೋನು ಅವಲಂಬಿತ ಕ್ಯಾನ್ಸರ್‌ಗಳಿಗೆ ಅವುಗಳ ವಿರುದ್ಧ ಕಾರ್ಯವೆಸಗುವ ಹಾರ್ಮೋನುಗಳನ್ನು ಪ್ರಯೋಗಿಸ ಲಾಗುತ್ತದೆ. ಇನ್ನೂ ರಜೋನಿವೃತ್ತಿ ಅಂದರೆ ಮುಟ್ಟು ನಿಂತಿಲ್ಲದ ಮಹಿಳೆಗೆ ಸ್ತನ ಕ್ಯಾನ್ಸರ್ ಉಂಟಾದ ಸಂದರ್ಭದಲ್ಲಿ ಆಕೆಯ ಅಂಡಾಶಯಗಳನ್ನು ತೆಗೆದುಹಾಕುವುದರಿಂದ ಇದೇ ಪರಿಣಾಮ ವನ್ನುಂಟು ಮಾಡುತ್ತದೆ. ಈಸ್ಟ್ರೋಜೆನ್ ಹಾರ್ಮೋನಿನ ವಿರುದ್ಧ ಕಾರ್ಯವೆಸಗುತ್ತದೆನ್ನಲಾದ ಟಾಮಾಕ್ಸಿಫೆನ್ (Tamoxifen) ಎಂಬ ಔಷಧಿ ಅತ್ಯುತ್ತಮ ಪರಿಣಾಮಗಳನ್ನು ನೀಡುತ್ತದೆಯೆಂದು ತಿಳಿದುಬಂದಿದೆ.

ಸಕಾಲದಲ್ಲಿ ಸೂಕ್ತ ವಿಧಾನಗಳನ್ನು ಅಳವಡಿಸಿ ಚಿಕಿತ್ಸೆ ಮಾಡುವುದರಿಂದ ಒಂದು, ಎರಡು ಮತ್ತು ಮೂರನೆ ಹಂತದ ವರೆಗಿನ ಮುಂದುವರಿದ ಸ್ತನ ಕ್ಯಾನ್ಸರ್‌ಗಳಿರುವ ಶೇಕಡಾ 50-60 ರೋಗಿಗಳನ್ನು ಕನಿಷ್ಟ 5 ವರ್ಷಗಳವರೆಗಾದರೂ ಸೌಖ್ಯವಾಗಿ ಬದುಕುಳಿಯುವಂತೆ ಮಾಡಬಹುದಾಗಿದೆ. ನಾಲ್ಕನೇ ಹಂತವನ್ನು ತಲುಪಿದವರಿಗೆ ಈಗ ನೀಡುವ ಚಿಕಿತ್ಸೆಗಳೆಲ್ಲ ಕೇವಲ ಶಮನ ಪರಿಣಾಮ ಬೀರಬಹುದು.

ಚಿಕಿತ್ಸೆಯ ನಂತರದ ಸ್ಥಿತಿ : ಚಿಕಿತ್ಸೆಯ ನಂತರ ಸ್ತನಗಳನ್ನು ಕಳೆದುಕೊಂಡು ಮಹಿಳೆ ದೈಹಿಕ ಹಾಗೂ ಮಾನಸಿಕವಾಗಿ ಬಳಲುವುದು ಸಹಜ. ಅವಳ ಮಾನಸಿಕ ಸ್ಥಿತಿ ಸುಧಾರಿಸಲು ಮನೋವೈದ್ಯರ ನೆರವು ಬೇಕಾಗಬಹುದು. ಸ್ತನವನ್ನು ಕಳೆದು ಕೊಂಡಿದ್ದರಿಂದ ಈ ಜಾಗದಲ್ಲಿ ಸೂರೂಪಿಕಾ ಚಿಕಿತ್ಸೆ ವಿಧಾನ ಗಳನ್ನನುಸರಿಸಿ ಇಲ್ಲವೇ ಕೃತಕ ಸ್ತನವನ್ನಿರಿಸಿ ಸಾಧ್ಯವಾದಷ್ಟು ಮುಂಚಿನಂತೇ ಕಾಣುವಂತೆ ಮಾಡಬಹುದು. ಆಕೆಯ ಪತಿ ಹಾಗೂ ಇತರ ಸಂಬಂಧಿಕರ ಸಹಾನುಭೂತಿಯ ನಡವಳಿಕೆಗಳು ಆಕೆಯಲ್ಲಿ ಮತ್ತೆ ಜೀವನೋತ್ಸಾಹ ಮೂಡಿಸಬಹುದು.

ಸ್ತನ ಕ್ಯಾನ್ಸರ್ ಉಂಟಾಗುವ ಹಲವು ಕಾರಣಗಳನ್ನು ಗಮನಿಸಿದಾಗ ಅದು ಬಾರದಂತೆ ಸ್ವಲ್ಪಮಟ್ಟಿಗೆ ಎಚ್ಚರವಹಿಸ ಬಹುದೆನ್ನಿಸುತ್ತದೆ. ಹತ್ತಿರದ ಸಂಬಂಧಿಗಳೊಡನೆ ವಿವಾಹ ಸಂಬಂಧ ಬೆಳೆಸದಿರುವುದರಿಂದ ಅನುವಂಶೀಯ ಸಾಧ್ಯತೆ ನಿವಾರಿಸಿಕೊಳ್ಳಬಹುದು. ಹೆಚ್ಚು ಕೊಬ್ಬಿನ ಅಂಶಗಳಿರುವ ಆಹಾರ ವಸ್ತುಗಳನ್ನು ಸೇವಿಸದಿರುವುದರಿಂದ ಸ್ವಲ್ಪಮಟ್ಟಿಗಾದರೂ ತಡೆಗಟ್ಟಬಹುದು. ಮಕ್ಕಳಿಗೆ ಹೆಚ್ಚು ಕಾಲ ಹಾಲೂಡಿಸುವ ಪದ್ಧತಿ ಅಳವಡಿಸಿಕೊಳ್ಳುವುದರಿಂದರೂ ಕ್ಯಾನ್ಸರಿನ ಸಾಧ್ಯತೆಗಳನ್ನು ಮಿತಿಗೊಳಿಸಬಹುದು. ಮ್ಯಾಮೋಗ್ರಾಫಿಯಂತಹ ಪರೀಕ್ಷೆ ಗೊಳಗಾಗುವುದರಿಂದ ಆರಂಭದ ಹಂತದ ಕ್ಯಾನ್ಸರ್‌ನ್ನು ಯಶಸ್ವಿಯಾಗಿ ನಿಭಾಯಿಸಲು ಸಾಧ್ಯ.

ಹೊಸ ಸಹಸ್ರಮಾನದಲ್ಲಿ ಮಹಿಳೆ

ಹೊಸ ಸಹಸ್ರಮಾನದಲ್ಲಿ ಸ್ತ್ರೀ ಚಳುವಳಿಯ ಅಗತ್ಯವಿದೆಯೆ ಎಂಬ ಪ್ರಶ್ನೆಗೆ 'ಹೌದು' ಎಂದು ಹೇಳದೆ ಬೇರೆ ದಾರಿಯಿಲ್ಲ. ಮಹಿಳಾ ಚಳುವಳಿ ಮಹಿಳೆಯ ಜೀವನದ ವಿವಿಧ ಕ್ಷೇತ್ರದ ಮೇಲೆ ಗಂಭೀರವಾದ ಪರಿಣಾಮವನ್ನು ಬೀರಿರುವುದನ್ನು ಗಮನಿಸಬಹುದು. ಈ ಪರಿಣಾಮ ಗಣನೀಯವಾಗಿದೆ. ಆದರೆ ಮೂಲಭೂತ ಬದಲಾವಣೆ ಕಂಡುಬರುತ್ತಿದೆಯೆ ಎಂಬುದು ಪ್ರಶ್ನಾರ್ಹವಾಗಿಯೇ ಉಳಿಯುತ್ತದೆ. ಯೂನಿಸೆಫ್ ವರದಿಯ ಪ್ರಕಾರ ಹೆಣ್ಣು ಮಗುವನ್ನು ಹುಟ್ಟುತ್ತಲೇ ಕೊಲ್ಲುವ ಪದ್ಧತಿ 32 ರಾಜ್ಯಗಳಲ್ಲಿ 27 ರಾಜ್ಯಗಳಲ್ಲಿ ರೂಢಿಯಲ್ಲಿದೆ. ಉದಾಹರಣೆಗೆ ಬಿಹಾರ ಹಾಗೂ ರಾಜಸ್ಥಾನದಂತಹ ಕೆಲವು ಜಿಲ್ಲೆಯಲ್ಲಿ 100 ಜನ ಪುರುಷರಿಗೆ 60 ಜನ ಹೆಣ್ಣು ಮಕ್ಕಳ ಸಂಖ್ಯೆ ಇದೆ. ಹೆಣ್ಣು ಮಕ್ಕಳು ಹುಟ್ಟುವುದನ್ನೇ ನಿರಾಕರಿಸುವಂತಹ ನಮ್ಮ ದೇಶದಲ್ಲಿ ಈ 'ಸಾವಿನಿಂದ' ತಪ್ಪಿಸಿಕೊಂಡ ಹೆಣ್ಣು ಮಕ್ಕಳ ಭವಿಷ್ಯ ಹೇಗೆ ರೂಪಿತವಾಗಬಹುದು?

1999 ಅಂತ್ಯದಲ್ಲಿ ಸ್ತ್ರೀಯರ ಮೇಲೆ ನಡೆಯುತ್ತಿದ್ದ ಹಿಂಸೆಯ ಪ್ರಮಾಣದಲ್ಲಿ ಹೆಚ್ಚಳ ಕಂಡು ಬಂದಿದೆ. ಸ್ತ್ರೀಯರು ಹಿಂಸೆಮುಕ್ತ ವಾತಾವರಣದಲ್ಲಿ ಬದುಕುತ್ತಿರುವುದು ಕಂಡು ಬರುವುದಿಲ್ಲ. ನಾಲ್ಕು ಗೋಡೆಯ ನಡುವೆ ನಡೆಯುವ ಸ್ತ್ರೀಯರು ಅನಿವಾರ್ಯವಾಗಿ ಒಪ್ಪಿಕೊಂಡಂತೆ ಕಂಡುಬರುತ್ತದೆ. ಸಾರ್ವಜನಿಕವಾಗಿ ಅವರ ಮೇಲೆ ನಡೆಯುವ ಹಿಂಸೆಗೆ ಸ್ತ್ರೀಯರು ನಾಲ್ಕು ಗೋಡೆಯೊಳಗೆ 'ಸೀಮಿತ'ವಾಗುವುದರ ಮೂಲಕ ಪರಿಹಾರವನ್ನು ಕಂಡುಕೊಳ್ಳುತ್ತಿದ್ದೇವೆ. ಈ ರೀತಿಯ ಬದಲಾವಣೆ ಮೂರು ದಶಕಗಳಲ್ಲಿ ಮಹಿಳೆಯರು ಹಾಗೂ ಮಹಿಳಾ ಚಳುವಳಿ ನಡೆಸಿದ ಹೋರಾಟವನ್ನು ನಿರಾಕರಿಸುವ ಪ್ರಕ್ರಿಯೆಯಾಗಿದೆ.

ಮಹಿಳೆಯರಿಗೆ ರಾಜಕೀಯ ಅವಕಾಶದ ಬಗ್ಗೆ ಸಾರ್ವಜನಿಕವಾಗಿ ಸಾಕಷ್ಟು ಗಂಭೀರವಾಗಿ ಚರ್ಚಿಸಲಾಗಿದೆ. ಮೀಸಲಾತಿಯ ಮಸೂದೆಯಲ್ಲಿ ಸಾಕಷ್ಟು ತಪ್ಪುಗಳಿವೆ. ಆದರೆ ಮಹಿಳೆಯರಾಗಿ ಆಯ್ಕೆ ಆಗಿ ಬರಲು ಸಾಧ್ಯವಿಲ್ಲದಿರುವ ವಾತಾವರಣದಲ್ಲಿ ಆಕೆಯ 'ಆಯ್ಕೆ' ಅವಕಾಶ ಮಾಡಿಕೊಡಬೇಕೆನ್ನುವ ಪ್ರಯತ್ನ ಅರ್ಥಪೂರ್ಣವಾಗಿದೆ.

ಸಂಸತ್ತಿಗೆ ಆಯ್ಕೆಯಾಗುವ ಈ ಅನಕ್ಷರಸ್ಥ ಮಹಿಳೆಯರು ಲಕ್ಷಾಂತರ ಜನರಿಗೆ ಏನು ಮಾಡಲು ಸಾಧ್ಯವಿಲ್ಲ. ಆದರೆ, ಈ ಸ್ತ್ರೀಯರು ನಾಲ್ಕು ಗೋಡೆಯ ಬಾಗಿಲುಗಳನ್ನು ತೆಗೆದು ಈಚೆ ಹೊರಬರುವುದೇ ಒಂದು ಬದಲಾವಣೆಯ ಸೂಚನೆ. ಮೀಸಲಾತಿಯ ಮಸೂದೆಗೆ ಪುರುಷರ ಪ್ರತಿಕ್ರಿಯೆಯು ಸೂಕ್ಷ್ಮವಾಗಿ ನೀಡುವ ಸೂಚನೆಗಳನ್ನು ಗಮನಿಸಬೇಕಾಗುತ್ತದೆ. "ಆಡಳಿತ ನಡೆಸಲು ನಮಗೆ ಬಿಡಿ" ನಿಮಗಿಂತ ನಮಗೆ ಚೆನ್ನಾಗಿ ಗೊತ್ತು" ಇದನ್ನು ಮಹಿಳೆ ಮೌನವಾಗಿ ಸಹಿಸಲಾರಳು. ಹಾಗಾಗಿಯೇ ಹೊಸ ಸಹಸ್ರಮಾನದಲ್ಲಿ ಮಹಿಳೆ ಮಹಿಳಾ ಚಳುವಳಿಯನ್ನು ಬಲಗೊಳಿಸುವುದು ಅತ್ಯಗತ್ಯವಾಗಿದೆ.

- ಕಲ್ಪನಾಶರ್ಮ, (ಕೃಪೆ : ಹಿಂದೂ)

ಅಡಿಗೆ ಮನೆಯಲ್ಲಿದ್ದು ಸಾಮಾಜಿಕ ಕಟ್ಟುಪಾಡುಗಳನ್ನು ಮೀರಲು ಸಾಧ್ಯವೆ?
ಒಂದು ವರದಿ

ಸ್ತ್ರೀವಾದವೆಂದರೆ ಪುರುಷರಂತಾಗಲು ಪ್ರಯತ್ನಿಸುವುದು ಅಲ್ಲ, ಸಮಾನತೆಗೆ ನಡೆಯುವ ಹೋರಾಟದಲ್ಲಿ ಮಹಿಳೆಯೇ ಮಹಿಳೆಗೆ ಮಾದರಿಯಾಗಬೇಕು. ಹೆಣ್ಣು ಒಂದು ಜೀವ. ಜೀವಕ್ಕೆ ನೋವಾದರೆ ಅದು ಸುಮ್ಮನಿರುವುದಿಲ್ಲ; ಪ್ರತಿಕ್ರಿಯೆ ನೀಡಿಯೇ ನೀಡುತ್ತದೆ. ಅದರಲ್ಲೂ ಗಂಡಸರಿಗಿಂತ ಹೆಂಗಸರೇ ಹೆಚ್ಚು ಸೂಕ್ಷ್ಮ ಸಂವೇದಿಗಳು ಎಂದು ಖ್ಯಾತ ಲೇಖಕಿ ವೈದೇಹಿ ಅಭಿಪ್ರಾಯಪಟ್ಟರು.

ಅವರು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹಲವಾರು ಸಂಘಟನೆಗಳೊಂದಿಗೆ ಜಂಟಿಯಾಗಿ ಆಯೋಜಿಸಿದ್ದ "ಮಹಿಳೆ ಸಮಸ್ಯೆಗಳು ಮತ್ತು ಸವಾಲುಗಳು" ವಿಚಾರಗೋಷ್ಠಿಯಲ್ಲಿ ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು. ಅತೀ ಸೂಕ್ಷ್ಮ ಸಂಗತಿಗಳನ್ನು ಗ್ರಹಿಸುವ ಗುಣವುಳ್ಳ ಮಹಿಳೆ ನಟನೆ, ವಾಸ್ತವ, ಕಷ್ಟಗಳು ಎಲ್ಲವನ್ನೂ ಬಳಸಿಕೊಂಡು ಬಾಳುವ ಜಾಣೆ. ಮಹಿಳೆಯರಲ್ಲೂ ಅನೇಕ ಬೇಂದ್ರೆಗಳು, ಕುವೆಂಪುಗಳು, ಕಾರಂತರು ಆಗಿ ಹೋಗಿದ್ದಾರೆ. ಆದರೆ ಅಂತಹವರನ್ನು ಗುರುತಿಸುವ ಕಾರ್ಯ ಆಗಿಲ್ಲ. ಮಹಿಳಾ ಕುವೆಂಪುಗಳು ಸೀರೆಯನ್ನು ಉಟ್ಟಿದ್ದರಿಂದ ಬರೀ ಸಾಮಾನ್ಯ ಸ್ತ್ರೀಯರಾಗಿ ಉಳಿದರು. ಅಕ್ಕಮಹಾದೇವಿ ಹೇಳಿದಂತೆ "ಇದ್ದಲ್ಲೇ ಇದ್ದು ಎಲ್ಲೆ ಮೀರು" ಎಂಬಂತೆ ಈ ಸಮಾಜ ಸ್ತ್ರೀಯರಿಗೆ ನೇಮಿಸಿರುವ ಅಡಿಗೆ ಮನೆಗಳಲ್ಲಿಯೇ ಇದ್ದು ಸಾಮಾಜಿಕ ಕಟ್ಟುಪಾಡುಗಳ ಎಲ್ಲೆಯನ್ನು ಮೀರಲು ಯತ್ನಿಸಬೇಕು ಎಂದರು.

ಪುರುಷ ಚಿಂತನೆಯ ಪ್ರಭಾವವಿರುವ ಹೆಂಗಸರು ಇರುವಂತೆ ಗಂಡಸರಲ್ಲೂ ಹೆಣ್ಣರುಳಿನವರಿದ್ದಾರೆ. ಕಾರಂತರು ಅಂತಹ ಚಿಂತಕರಲ್ಲೊಬ್ಬರು. ಜೀವನದ ಗತಿಯಲ್ಲಿ ಸ್ತ್ರೀಯರನ್ನು ಹಿಂದೆ ಬಿಟ್ಟು ವೇಗವಾಗಿ ಹೋಗುತ್ತಿರುವ ಗಂಡಸರನ್ನು ಕೈಹಿಡಿದೆಳೆದು ನಿಲ್ಲಿಸಿ ನಮ್ಮೊಂದಿಗೆ ನಡೆಯುವಂತೆ ಮಾಡಬೇಕಲ್ಲದೆ ಓಡುತ್ತಿರುವ ಪುರುಷ ವರ್ಗದೊಂದಿಗೆ ಪೈಪೋಟಿ ನಡೆಸಿ ಸೆಣಸುವ ಅಗತ್ಯ ಇಲ್ಲ ಎಂದು ಹೇಳಿದ ವೈದೇಹಿಯವರು ಜೀವನದ ದಿನನಿತ್ಯದ ಬೇಗುದಿಗಳಲ್ಲಿ ಬಳಲಿ ಮಹಿಳೆಯರ ಸ್ಪಂದನೆ ಬರಡಾಗುತ್ತದೆ. ಜೀವಂತಿಕೆ ಉಳಿಸಿಕೊಳ್ಳಬೇಕಾದರೆ ಮಹಿಳೆ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಬೇಕು ಎಂದು ಕರೆಯಿತ್ತರು.

ಮಧ್ಯಾಹ್ನ "ಮಹಿಳೆ-ಒಂದು ಸಾಂಸ್ಕೃತಿಕ ಚಿಂತನೆ" ವಿಷಯದ ಕುರಿತು ಉಪನ್ಯಾಸ ನೀಡಿ ಚರ್ಚೆ ನಡೆಸಿದವರು ಲೇಖಕಿ ಚ. ಸರ್ವಮಂಗಳ. ಸಮಾಜದ ಮೇಲ್ವರ್ಗದ ರಾಜಕಾರಣಿ ಕುಟುಂಬದಲ್ಲಿ ಹುಟ್ಟಿ ಬೆಳೆದು ಬಂದ ರೀತಿಯನ್ನು ಆತ್ಮೀಯವಾಗಿ ಸಂವಾದಿಸಿದ ಸರ್ವಮಂಗಳ ಗೋಷ್ಠಿಯಲ್ಲಿ ನೆರೆದ ಹೆಚ್ಚಿನ ಹೆಂಗಳೆಯರ ಮನ ಸೆಳೆದರು. ತನ್ನ ರಾಜಕಾರಣಿ ತಂದೆಯ ದರ್ಪ ಗೊಂದಲಗಳ ದ್ವಂದ್ವಗಳನ್ನು ವಿವರಿಸುತ್ತಾ ಹೋದ ಸರ್ವಮಂಗಳ ತನ್ನ ತಾಯಿ ಮತ್ತು ಅಜ್ಜಿ ಆಗಿನ ಕಾಲದ ಸಾಂಪ್ರದಾಯಿಕ ಉಸಿರುಗಟ್ಟಿಸುವ ವಾತಾವರಣದಲ್ಲೂ ನಿರಾಳವಾಗಿ ಬದುಕಿ ಬಾಳಿದ್ದನ್ನು ಅನಾವರಣ ಗೊಳಿಸುತ್ತಾ ತಮ್ಮ ವ್ಯಕ್ತಿ ಸ್ವಾತಂತ್ರ್ಯ ಪಡೆಯಲು ಹುಡುಕಿದ ಅನೇಕಾನೇಕ ಹೊಸ ದಾರಿಗಳನ್ನು ಬಿಚ್ಚಿಟ್ಟರು. ಈ ಹೊಸ ಬಿಡುಗಡೆಯ ಹಾದಿಗಳು ಸುಳ್ಳಿನ ಮೂಲದಿಂದ ಬಂದದ್ದನ್ನು ಹೇಳಿ ರಂಜಿಸಿದರು. ಆಂಗ್ಲ ಪದ್ಧತಿಯ ಶಿಕ್ಷಣ ಪುರುಷನನ್ನು ಹಳೇಕಾಲದ ಶೋಷಿತ ಪದ್ಧತಿಯ ಪ್ರಭಾವದಿಂದ ಪೂರ್ಣ ಮುಕ್ತವಾಗಿಸದೆ ಇರುವುದರಿಂದ ಈಗಿನ ಪುರುಷ ಒಂದು ರೀತಿಯ ದ್ವಂದ್ವಕ್ಕೆ-ಗೊಂದಲಕ್ಕೆ ಈಡಾಗಿರುವುದರ ಕುರಿತು ಉದಾಹರಿಸಿದರು. ಗಂಡು ಹಲವು ವೇಳೆ ತನ್ನ ಸ್ವಂತ ನಿಲುವುಗಳಿಗಾಗಿ ಹೆಣ್ಣಿನ ಮೇಲೆ ಅಧಿಕಾರ ಚಲಾಯಿಸಲು ಯತ್ನಿಸುತ್ತಾನಾದರೂ ಬಹಳಷ್ಟು ಸಂದರ್ಭಗಳಲ್ಲಿ ಕೂಡಾ ಒಂದು ಕಾರಣವಾಗಿದೆ ಎಂದು ವಿಮರ್ಶಿಸಿದರು. ಆದ್ದರಿಂದ ತಾನು ನಂಬಿಕೊಂಡಿದ್ದಂತಹ ತತ್ವಗಳಿಗಾಗಿ ಹೆಣ್ಣನ್ನು ಶೋಷಿಸುವ ಹಳೆಯ ಕಾಲದ ಗಂಡಿಗಿಂತ ವಿದ್ಯಾಭ್ಯಾಸದ ಪದ್ಧತಿಯಿಂದ ವಿಚಲಿತನಾಗಿರುವ ಪುರುಷ ತುಂಬಾ ಅಪಾಯಕಾರಿ ಎಂದು ಅಭಿಪ್ರಾಯಪಟ್ಟರು.

ಭಾರತೀಯ ಕುಟುಂಬ ವ್ಯವಸ್ಥೆಯನ್ನು ಪುರಸ್ಕರಿಸಿ ಮಾತನಾಡಿದ ಸರ್ವಮಂಗಳಾ ಮದುವೆ ಎಂಬ ಸಂಸ್ಥೆಯನ್ನು ಧಿಕ್ಕರಿಸಬೇಕು. ಆದರೆ ಅದು ವೈಯ್ಯಕ್ತಿಕ ಆಯ್ಕೆಯ ಪ್ರಶ್ನೆಯಾಗ ಬೇಕೇ ಹೊರತು ಎಲ್ಲರಿಗೂ ಅನ್ವಯಿಸುವಂತಾಗಬಾರದು, ಹೆಂಗಸಿನ ಪ್ರಪಂಚ ಅವಳನ್ನು ಮಂಥನ ನಡೆಸಲು ಹೆಣ್ಣು ಅಶಕ್ತ ಳಾಗದ್ದಾಳೆ. ಹೀಗೆಯೇ ಬರ್ತಾ ಬರ್ತಾ ಸ್ತ್ರೀಯರು ಅಧಿಕಾರವೇ ಇಲ್ಲದ ಜಗತ್ತಿಗೆ ಹೋಗುತ್ತಿದ್ದಾರೆ ಎಂದು ವಿಷಾದಿಸಿದರು.

ತಮ್ಮ ಲೇಖನಗಳಲ್ಲಿ, ಕಥೆಗಳಲ್ಲಿ, ನಾಟಕಗಳಲ್ಲಿ, ಕವಿತೆಗಳಲ್ಲಿ ಸ್ತ್ರೀಸಮಾನತೆಗೆ ಪೂರಕವಾದ ಅಂಶಗಳನ್ನು ಪ್ರತಿಬಿಂಬಿಸುವ ವೈದೇಹಿ ತಮ್ಮ ಮಾತಿನಲ್ಲಿ ಕೆಲವೊಂದು ನಿಷ್ಠುರ ನಿಲುವುಗಳನ್ನು ಪ್ರತಿಪಾದಿಸಿದರೂ, ಕ್ಲಿಷ್ಟಕರ ತಾತ್ವಿಕ ವಿಷಯಗಳಿಗೆ ಚರ್ಚೆ ಬಂದಾಗ ಸಂದರ್ಭೋಚಿತವಾಗಿ ಮುಖ್ಯ ವಿಷಯದಿಂದ ನುಣುಚಿಕೊಳ್ಳುತ್ತಿದ್ದರೂ ಬಹುಶಃ ಬರವಣಿಗೆಯಲ್ಲಿ ತೋರಿಸುವ ಗಟ್ಟಿ ನಿಲುವುಗಳನ್ನು ಮಾತಿನಲ್ಲಿ ವ್ಯಕ್ತಪಡಿಸುವುದು ಕಷ್ಟಕರವೆಂದೇನೋ ಅಥವಾ ಪ್ರಶ್ನೆ ಕೇಳಿದವರ ಮನನೋಯಿಸಬಾರದೆಂಬ ಮೆದುಧೋರಣೆಯೂ ಇರಬಹುದೇನೋ. ಆದರೆ ಸಾಹಿತ್ಯ ಲೋಕದ ಈ ಧೀರ ಮಹಿಳೆಯರು ಸಾಮಾನ್ಯರಿಗಿಂತ ಭಿನ್ನವಾದ ವೈಚಾರಿಕ ಪ್ರಗತಿಪರ ಅಭಿಪ್ರಾಯಗಳನ್ನೇ ನೀಡಬೇಕೆಂದು ಅಪೇಕ್ಷೆಪಡುವುದು ಸ್ವಲ್ಪ ಹೆಚ್ಚಾಯಿತೇನೋ!

ವೈದೇಹಿಗಿಂತ ಭಿನ್ನವಾದ ರೀತಿಯಲ್ಲಿ ಮಾತನಾಡಿದ ಸರ್ವಮಂಗಳಾ ಉಪನ್ಯಾಸದಲ್ಲಿ ತಮ್ಮ ಜೀವನದ ಅನುಭವಗಳನ್ನು ಬಿಚ್ಚಿಡುವಾಗಲೂ ಎಲ್ಲಿಯೂ ಸಂಘರ್ಷಕರ ಘಟನೆಗಳನ್ನು ವಿವರಿಸಲಿಲ್ಲ. ಅವರ ಜೀವನದಲ್ಲಿ ಸಂಘರ್ಷಣೆಯುಕ್ತ ಘಟನೆಗಳು ಇಲ್ಲದೇ ಹೋದರೆ ಅಂತಹುದಕ್ಕೆ ನಮ್ಮ ಒತ್ತಾಯವಿಲ್ಲ. ಆದರೆ ಸಾಮಾನ್ಯ ಮಹಿಳೆ ದಿನನಿತ್ಯದ ಬದುಕಿನಲ್ಲಿ ಹಲವಾರು ಸಂಘರ್ಷಗಳನ್ನು ಎದುರಿಸಿ ಬಾಳಬೇಕಾಗಿರುವುದರಿಂದ ಇಂತಹ ಸಾಮಾನ್ಯ ಘಟನೆಗಳ ಉದಾಹರಣೆ ಕೂಡಾ ಅಲ್ಲಿ ನೆರೆದಿದ್ದ ಸಭಿಕರಿಗೆ ತಮ್ಮ ಜೀವನದ ಎಳೆಯಾಗಿಸಿ ತತ್ವಗಳಿಗೂ, ಹಸಿ ಬದುಕಿಗೂ ಸಂಬಂಧ ಕಲ್ಪಿಸಬಹುದಿತ್ತು. ಅನೇಕ ಬಾರಿ ಸರ್ವಮಂಗಳಾ ಮಹಿಳೆ ಅಡುಗೆ ಮನೆಯಲ್ಲೇ ಇದ್ದು ತನ್ನ ಸಾಕ್ಷಾತ್ಕಾರ ಹುಡುಕಿಕೊಳ್ಳಬೇಕು ಎಂದು ಹೇಳಿದ್ದು ವಿಪರೀತವಾಗಿ ಹರಡಿ ಸಭಿಕರಲ್ಲಿದ್ದ ಮಹಿಳೆಯೊಬ್ಬರು "ಬಹಳಷ್ಟು ವೃತ್ತಿಪರ ಕೆಲಸಗಳಿಗೆ ಮಹಿಳೆ ಅರ್ಹಳಲ್ಲ ಎಂದು ಅನಿಸುತ್ತದೆ, ಅಂತಹ ಕೆಲಸಗಳಿಗೆ ಪುರುಷರೇ ಮಹಿಳೆಗಿಂತ ಅರ್ಹರು" ಎಂದು ಪ್ರತಿಕ್ರಿಯಿಸಿದಾಗ ಸರ್ವಮಂಗಳಾ ಅನಿವಾರ್ಯವಾಗಿ ಹೌದು ಹೌದು ಎಂದು ಸಮ್ಮತಿ ಸೂಚಿಸಲೇ ಬೇಕಾಯಿತು.

ಸರ್ವಮಂಗಳೆ ತನ್ನ ವೈಯ್ಯಕ್ತಿಕ ಅಭಿಪ್ರಾಯವನ್ನು ಸಾರ್ವತ್ರಿಕಗೊಳಿಸಲು ಯತ್ನಿಸಿದ್ದು 'ಮಹಿಳಾ ಮೀಸಲಾತಿ' ಕುರಿತು ತನ್ನ ವೈಯ್ಯಕ್ತಿಕ ಅಭಿಪ್ರಾಯದಲ್ಲಿ ಮಹಿಳೆಯರಿಗೆ ಮೀಸಲಾತಿ ಬೇಡ, ಕನಿಷ್ಠ ಕೆಲವು ಸ್ಥಾನಗಳಿಗಾದರೂ ಪ್ರತಿಭೆಯೇ ಮಾನದಂಡವಾಗಬೇಕು ಎಂದು ಅನಿರೀಕ್ಷಿತವಾಗಿ ಪ್ರತಿಗಾಮಿ ನಿಲುವನ್ನು ಪ್ರದರ್ಶಿಸಿದರು. ಮೀಸಲಾತಿಯೊಂದರಿಂದಲೇ ಎಲ್ಲಾ ಶೋಷಣೆಯ ನಿವಾರಣೆ ಸಾಧ್ಯವಿಲ್ಲವೆಂಬುದು ನಿಜವಾದರೂ, ಜನಸಂಖ್ಯೆಯ ಅರ್ಧದಷ್ಟಿರುವ ಸ್ತ್ರೀಯರನ್ನು ಅಧಿಕಾರದ ಸ್ಥಾನಗಳಲ್ಲಿ ಪ್ರಜ್ಞಾಪೂರ್ವಕವಾಗಿಯಾದರೂ ಒಳಗೊಳ್ಳುವಂತೆ ಮಾಡದಿದ್ದರೆ ಸರ್ವಮಂಗಳಾ ನಂಬಿರುವ ಪ್ರತಿಭಾವಂತರೇ ಕಳೆದ 50 ವರ್ಷಗಳಿಂದ ದೇಶವನ್ನು ದಿವಾಳಿಯೆಬ್ಬಿಸಿದಂತೆ ಮುಂದಿನ ವರ್ಷಗಳಲ್ಲೂ ಚಿಂದಿಯೆಬ್ಬಿಸುವುದು ಗ್ಯಾರಂಟಿ. ಅಷ್ಟಕ್ಕೂ ಸರ್ವಮಂಗಳಾ ಹೇಳುವಂತೆ ಪ್ರತಿಭೆಯ ಮಾನದಂಡವನ್ನು ನಿರ್ಧರಿಸುವವರು ಯಾರು? ವ್ಯವಸ್ಥೆಯ ಚುಕ್ಕಾಣಿ ಹಿಡಿದುಕೊಂಡವರು ಇಂತಹ ಪ್ರತಿಭೆಯ ಮಟ್ಟದ ನಿರ್ಣಾಯಕರಿಂದಲ್ಲೇ ಅಲ್ಲವೇ? ಭಾರತೀಯ ಸಮಾಜ ಸಾವಿರಾರು ವರ್ಷಗಳಿಂದ ಸಮಾಜದ ಹೆಚ್ಚಿನ ವರ್ಗಗಳಿಗೆ ಫಲವನ್ನು ಹಂಚದೆ ಅವರನ್ನು ಬರೀ ಶೋಷಿಸಿ ಅಧೋಗತಿಗೆ ಇಳಿಸಿದ್ದು!

ಗಂಭೀರ ಸ್ವರೂಪದ ವಿಚಾರ ಮಂಥನಗಳಿಗೆ ಜನ ಬರುವುದಿಲ್ಲ ಎಂಬ ನಂಬಿಕೆಯನ್ನು ಸುಳ್ಳಾಗಿಸಿದ ಸೋಮವಾರಪೇಟೆಯ ಸಂಘಟಕರು, ಇಡೀ ಕಾರ್ಯಕ್ರಮದಲ್ಲಿ ಓಡಾಡಿಕೊಂಡು ಸಮರ್ಪಕವಾಗಿ ನಿರ್ವಹಿಸಿದವರು ಮಹಿಳೆಯರೇ.

ಐವನ್

ಮಾನಸ ತಿಂಗಳ ಪತ್ರಿಕೆಯನ್ನು ಓದುಗರ ಸಹಾಯದಿಂದ ಪ್ರಕಟಿಸುತ್ತಿದ್ದೇವೆ. ಯಾವುದೇ ಸಂಸ್ಥೆಯ ಅಥವಾ ಸರ್ಕಾರದ ನೆರವಿಲ್ಲದೆ ಸ್ವಾಯತ್ತವಾಗಿ ಮಹಿಳೆಯರೇ ಪ್ರಕಟಿಸುತ್ತಿದ್ದೇವೆ. ಸಹೃದಯ ಓದುಗರು ವರ್ಷಕ್ಕೆ 100-00 ರೂ.ಗಳನ್ನು ಕೊಡುಗೆಯಾಗಿ ನೀಡುವುದರ ಮೂಲಕ ಪತ್ರಿಕೆಯ ಪ್ರಕಟಣೆಗೆ ಹಾಗೂ ಮಾನಸದ ಚಟುವಟಿಕೆಗಳಿಗೆ ನೆರವಾಗಬೇಕೆಂದು ಕೋರುತ್ತೇವೆ.

- ಸಂ. ಮ.

ದಲಿತ ಸ್ತ್ರೀ ಲೋಕ

ಧ್ವನಿಗೂ ಜಾತಿಗೂ ಏನು ಸಂಬಂಧ?

- ಸುಮನ

ನಾವು ಮೀಸಲಾತಿಯ ಬಗ್ಗೆ ಮಾತನಾಡುವಾಗಲೆಲ್ಲಾ ಎಸ್.ಸಿ. ಹಾಗೂ ಎಸ್.ಟಿ.ಯವರಿಗೆ ನೀಡಿದ 18% ಮೀಸಲಾತಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಆದರೆ ಎಸ್.ಸಿ. ಮತ್ತು ಎಸ್.ಟಿ. ಶಬ್ದಕ್ಕೆ ಅಂಟಿರುವ ಕಳಂಕಕ್ಕೆ ಹೋಲಿಸಿದರೆ 18% ಮೀಸಲಾತಿ ನೀಡಿರುವ ಅಂಶ ಮಹತ್ವದ ಸಂಗತಿಯೇ ಅಲ್ಲ. ನಮ್ಮ ಜಾತಿ, ಎಸ್.ಸಿ. ಎಸ್.ಟಿ. ಎಂದಾಗ ವಿವಿಧ ಬಗೆಯ ಪ್ರತಿಕ್ರಿಯೆಗಳು ಜನರಿಂದ ಬರುತ್ತದೆ. ಜನರು ನಿಮ್ಮನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಾರೆ.

ನೀವು ನೋಡುವುದಕ್ಕೆ ಬೆಳ್ಳಗಿದ್ದು, ನಾಜೂಕಾದ ಭಾಷೆಯನ್ನು ಬಲ್ಲವರಾಗಿದ್ದು, ಜನರಿಗೆ ಎಸ್.ಸಿ. ಎಂದು ತಿಳಿದರೆ ಅವರ ಮೊದಲ ಉದ್ಗಾರ "ನಿಮ್ಮನ್ನು ನೋಡಿದ್ರೆ ಹಾಗೆ ಕಾಣಿಸ್ತೋಲ್ಲ?" ಏಕೆ? ನೋಡಿದ ಕೂಡಲೇ ಎಸ್.ಸಿ. ಎಂದು ಗುರುತಿಸಿಸುವ ನಕಾರಾತ್ಮಕ ವಿಶಿಷ್ಟ ಗುಣಗಳು ಅವರಿಗಿವೆಯೆ?

ಎಸ್.ಸಿ. ಗಳು ಎಂದು ತಿಳಿದ ತಕ್ಷಣ ಜನರು ಬಾಡಿಗೆಗೆ ಮನೆ ನೀಡಲು ನಿರಾಕರಿಸುತ್ತಾರೆ. ನಾನು ಒಂದು ಕೋಣೆಯನ್ನು ಬಾಡಿಗೆ ಹಿಡಿಯಲು ಒಕ್ಕಲಿಗರವಳು ಎಂದು ಸುಳ್ಳು ಹೇಳಬೇಕಾದ ವಿಚಿತ್ರ ಅನುಭವ ನನಗಾಗಿದೆ. ನಾನು ಬಾಡಿಗೆಗೆ ಇದ್ದ ಮನೆಯ ಯಜಮಾನರ ಮೊಮ್ಮಗಳಿಗೆ ಸಂಗೀತ ಹೇಳಿಕೊಡಲು ಸಂಗೀತದ ಮೇಷ್ಟ್ರು ಬರುತ್ತಿದ್ದರು. ನನಗೂ ಸಂಗೀತದಲ್ಲಿ ತುಂಬಾ ಆಸಕ್ತಿ ಇದ್ದುದರಿಂದ ನಾನು ಸಂಗೀತದ ಕ್ಲಾಸ್‌ಗೆ ಸೇರಿಕೊಂಡೆ. ಒಮ್ಮೆ ಅವರು ನನ್ನ ಜಾತಿಯನ್ನು ವಿಚಾರಿಸಿದರು. ಆಗಲೂ ನಾನು ಸುಳ್ಳನ್ನು ಹೇಳಬೇಕಾಯಿತು. ಆಗ ಅವರ ತಕ್ಷಣದ ಪ್ರತಿಕ್ರಿಯೆ "ನೀನು ಗೌಡರ ಹುಡುಗಿಯಾಗಿಯೇ ನಿನ್ನ ಧ್ವನಿ ಇಷ್ಟು ಮಧುರವಾಗಿದೆ. ಇನ್ನು ನನ್ನ ಜಾತಿಯಾಗಿದ್ದರೆ" (ಬ್ರಾಹ್ಮಣ) ಎಂದರು. ನನ್ನ ಮಧುರವಾದ ಧ್ವನಿಗೂ ಜಾತಿಗೂ ಏನು ಸಂಬಂಧವಿದೆ? ಈ ತರದ ನೂರಾರು ಘಟನೆಗಳನ್ನು ಪಟ್ಟಿಮಾಡುತ್ತಾ ಹೋಗಬಹುದು.

ನಾನು ಈ ಜಾತಿಯಲ್ಲಿ ಹುಟ್ಟಿರುವುದು ಆಕಸ್ಮಿಕ. ಇದಕ್ಕಾಗಿ ನಾನು ಯಾಕೆ ಶಿಕ್ಷೆಯನ್ನು ಅನುಭವಿಸಬೇಕು? ಆದರೆ ಇದರ ಅರ್ಥ ನಾನು ಎಸ್.ಸಿ. ಆಗಿ ಹುಟ್ಟಿರುವುದಕ್ಕಾಗಿ ವ್ಯಥೆ ಪಡುತ್ತೇನೆಂದಲ್ಲ. ನಾನು ಎಸ್.ಸಿ.ಯಾಗಿರುವುದು ಅಭಿಮಾನ ಹಾಗೂ ಹೆಮ್ಮೆಯ ಸಂಗತಿ. ನಾನು ಎಸ್.ಸಿ.ಯಾಗಿರದಿದ್ದರೆ 'ತಾರತಮ್ಯ'ದ ಕಲ್ಪನೆ ನನಗೆ ಅರ್ಥವೇ ಆಗುತ್ತಿರಲಿಲ್ಲ. ಜನರ ಹುಟ್ಟಿನ ಆಧಾರದ ಮೇಲೆ ಜನರನ್ನು ಮೇಲುಕೀಳೆಂದು ನೋಡುವುದು ನನ್ನಿಂದ ಸಾಧ್ಯವೇ ಆಗುವುದಿಲ್ಲ. ನೀವು ನೋಡಲು ಅಂದವಾಗಿದ್ದರೂ, ಬುದ್ಧಿವಂತರಾಗಿದ್ದರೂ, ಅವರನ್ನು ಮೀಸಲಾತಿಯ ಕ್ಯಾಟಗಿರಿಯಲ್ಲಿಯೇ ಇಡಲಾಗುತ್ತದೆ. ಯಾವಾಗಲು ನಿಮ್ಮನ್ನು ಇತರರೊಂದಿಗೆ ಸಮಾನವಾಗಿ ನೋಡದೇ ಅಂಚಿಗೆ ತಳ್ಳಲಾಗುತ್ತದೆ. ನಿಮ್ಮನ್ನು ಸದಾ ಕೆಳದರ್ಜೆಯ ಮಾಪನದಿಂಧ ಅಳೆಯಲಾಗುತ್ತದೆ. ನೀವು ಆಕಸ್ಮಿಕವಾಗಿ ಈ ಜಾತಿಯಲ್ಲಿ ಹುಟ್ಟಿರುವುದರಿಂದ, ಈ ನೋವನ್ನು ಅನುಭವಿಸಲೇ ಬೇಕಾಗುತ್ತದೆ. ಈ ಆಕಸ್ಮಿಕ ಹುಟ್ಟಿಗೆ ನೀಡಲಾದ 18% ಮೀಸಲಾತಿಯ ಬಗ್ಗೆ ಇತರರು ಯಾಕಿಷ್ಟು ದ್ವೇಷವನ್ನು ವ್ಯಕ್ತ ಪಡಿಸಬೇಕು?

ಆರ್ಥಿಕವಾಗಿ ಹಿಂದುಳಿದವರು ಸಾಕಷ್ಟು ಜನರು ಇತರ ಜಾತಿಯಲ್ಲಿ ಇರುವವರೆಂದು ನಾನು ಒಪ್ಪುತ್ತೇನೆ. ಅವರಿಗೂ ಮೀಸಲಾತಿಯ ಸೌಲಭ್ಯಗಳು ಸಿಗಬೇಕೆಂಬ ವಾದವನ್ನು ನಾನು ಒಪ್ಪುತ್ತೇನೆ. ಇದಕ್ಕೆ ನನ್ನದೊಂದು ಸಲಹೆ, ಎಲ್ಲಾ ಜಾತಿಯೊಳಗಿನ ಆರ್ಥಿಕವಾಗಿ ಹಿಂದುಳಿದ ಜನರ ಪಟ್ಟಿಯೊಂದನ್ನು ತಯಾರಿಸಿ. ಅವರನ್ನೆಲ್ಲಾ ಎಸ್.ಸಿ. ಎಂದು ಕರೆಯಿರಿ. ಇದು ಸಾಮಾಜಿಕವಾಗಿ ವಂಚಿತರಾದವರ ಒಂದು ಪಟ್ಟಿ. ಆದರೆ ಇವರಿಗೆ ಎಸ್.ಸಿ. ಎಂಬ ಹೆಸರನ್ನು ಬಿಟ್ಟು ಬೇರೆ ಯಾವುದೇ ಹೆಸರನ್ನು ನೀಡುವುದನ್ನು ನಾನು ಒಪ್ಪುವುದಿಲ್ಲ. ಅವರಿಗೆ ಬೇಕಾಗಿರುವ ಮೀಸಲಾತಿಯನ್ನು ನೀಡಿ, ಆದರೆ, ಅವರನ್ನು ಎಸ್.ಸಿ. ಎಂದು ಕರೆಯಬೇಕಾಗುತ್ತದೆ. ಇದನ್ನು ಒಪ್ಪುತ್ತಾರೆಯೇ?

ಹಾಗಿದ್ದರೆ ಎಸ್.ಸಿ. /ಎಸ್.ಟಿ.ಗಳಿಗೆ ನೀಡಲಾದ 18% ಮೀಸಲಾತಿಯ ವಿರುದ್ಧವೇಕೆ ಮಾತನಾಡುತ್ತಾರೆ? ಇದರ ಬಗ್ಗೆ ಮಾತನಾಡುವ ಹಕ್ಕು ಬೇರೆಯವರಿಗೆಯೆಂದು ನಾನು ಭಾವಿಸುವುದಿಲ್ಲ. 'ಎಸ್.ಸಿ.' ಹೆಸರಿಗೆ ಅಂಟಿದ ಕಳಂಕಕ್ಕೆ ಹೋಲಿಸಿದರೆ 18% ಮೀಸಲಾತಿ ಸಮಾಜ ನೀಡುತ್ತಿರುವುದು ಅತ್ಯಂತ ಚಿಕ್ಕ ಬೆಲೆ.

ಮೌನ ಮಾತಾದಾಗ.....

ಹೆಣ್ಣು - ಅವಳ ಸ್ವಾತಂತ್ರ್ಯ

- ವೈ. ಎಸ್. ವತ್ಸಲ

ಮಗು ಹುಟ್ಟಿದೆ ಎಂದು ತಿಳಿದ ಕೂಡಲೇ, ಯಾವ ಮಗು ಹುಟ್ಟಿರುವುದು ಎಂದು ತಿಳಿಯುವ ಕುತೂಹಲ ಎಲ್ಲರಿಗೂ ಇರುವುದು ಸಹಜ. ಆದರೆ ಮಗು ಹೆಣ್ಣು ಎಂದು ತಿಳಿದ ಕೂಡಲೇ ಅದನ್ನು ತೆಗೆದುಕೊಳ್ಳುವ ಮತ್ತು ತೋರ್ಪಡಿಸುವ ರೀತಿಯೇ ಬೇರೆ. ಹೆಣ್ಣು/ಗಂಡು ಎಂಬ ತಾರತಮ್ಯ ಮಗುವಿನ ಹುಟ್ಟಿನಿಂದಲೇ ಆರಂಭವಾಗುವುದು.

ಬಾಲ್ಯದಲ್ಲಿ ಹೆಣ್ಣುಮಕ್ಕಳು ಸ್ವಲ್ಪ ಜೋರಾಗಿ ಮಾತನಾಡಿದರೆ, ಎದುರಿಸಿ ಮಾತನಾಡಿದರೆ ಅವಳಿಗೆ ಬಜಾರಿ, ಗಂಡುಬೀರಿ ಎಂದು ಹೆಸರಿಟ್ಟು ಕರೆಯುತ್ತಾರೆ. ಜೊತೆಯಲ್ಲಿ ಬೆಳೆಯುವ ಅಣ್ಣ ಅಥವಾ ತಮ್ಮನನ್ನು ಕೀಟಲೆ ಮಾಡಿದರೆ, ಹೆಣ್ಣು ಮಕ್ಕಳನ್ನು ಬೈಯ್ಯುತ್ತಾರೆ. ಹಾಗೇ ಮಗನೇ ವಂಶ ಉದ್ಧಾರ ಮಾಡುವವ, ಅವನನ್ನು ಬೈಯ್ಯಬಾರದು, ಎದುರು ಹಾಕಿಕೋ ಬಾರದು ಎಂದು ಬೆಳೆಸುವುದರಲ್ಲೂ ತಾರತಮ್ಯ.

ಬಾಲ್ಯದಿಂದಲೂ ಗಂಡು ತಾನೇ ಗಂಡಸು, ತನ್ನ ಮಾತೇ ನಡೆಯಬೇಕು, ಹೆಣ್ಣು ತನ್ನ ಅಡಿಯಾಳು, ಅವಳು ತಾನು ಹೇಳಿದಂತೆ ಕೇಳಬೇಕು, ಎನ್ನುವ ಭಾವನೆಯನ್ನು ತನ್ನಲ್ಲಿ ಬೆಳೆಸಿ ಕೊಳ್ಳುತ್ತಾನೆ. ವಿದ್ಯಾಭ್ಯಾಸ, ಆಟ, ಓಟ, ಕೆಲಸ ಇತ್ಯಾದಿಗಳಲ್ಲೂ ಹೆಣ್ಣಿಗೆ/ಗಂಡಿಗೆ ಎಂಬ ಮೀಸಲಾತಿ ಇನ್ನು ನಾವು ಕಾಣುತ್ತಲೇ ಇದ್ದೇವೆ. ಹೆಣ್ಣು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಆಸೆ ಪಟ್ಟರೆ, ನಿನಗಿಂತ ಹೆಚ್ಚು ಓದಿರುವ ಹುಡುಗನನ್ನು ಹುಡುಕ ಬೇಕಾಗುವುದು, ನಮಗದು ಸಾಧ್ಯವಿಲ್ಲವೆಂದು ಎಷ್ಟೋ ಜನ ತಂದೆತಾಯಿಯರು ತಮ್ಮ ಹೆಣ್ಣುಮಕ್ಕಳ ಆಸೆಗಳನ್ನು ಚಿವುಟಿ ಹಾಕಿರುತ್ತಾರೆ. ಇದು ಅಸಹನೀಯ, ಇನ್ನು ಮದುವೆ ವಿಷಯದಲ್ಲಿ ಅಷ್ಟೇ, ಅವಳಿಗೆ ಇಷ್ಟವಾಗಿರುವ ಗಂಡು ಎನ್ನುವುದಕ್ಕಿಂತ, ಅವಳ ತಂದೆತಾಯಿಗೆ, ಮನೆಯವರಿಗೆ ಹುಡುಗ ಇಷ್ಟವಾಗಿದ್ದರೆ ಸಾಕು. ವರದಕ್ಷಿಣೆಯೆಂಬ ದೈತ್ಯಾಕಾರದ ಪಿಡುಗಿಗೆ ಬಲಿಯಾದ ಹೆಣ್ಣುಮಕ್ಕಳು ಲೆಕ್ಕವಿಲ್ಲದಷ್ಟು ವರದಕ್ಷಿಣೆ ಕೊಡಲು ಸಾಧ್ಯವಾಗದ ತಂದೆ ತಾಯಿಯರಿಗೆ ಭಾರವಾಗಿ, ಅಕ್ಕಪಕ್ಕದವರ ಮಾತುಗಳಿಗೆ ಸಿಲುಕಿ ನರಳುತ್ತಿರುವ ಅಭಾಗಿನಿಯರು ಬೇಕಾದಷ್ಟಿದ್ದಾರೆ. ಇಂತಹವರಿಗೆ ಎಂದಿಗೆ ಮುಕ್ತಿ?

ಬೇಕಾದಷ್ಟು ವರದಕ್ಷಿಣೆ ಕೊಟ್ಟು, ಗಂಡಿನವರು ಕೇಳಿದಷ್ಟು ಖರ್ಚುಮಾಡಿ ಮದುವೆ ಮಾಡಿಕೊಟ್ಟಿರುವ ಹೆಣ್ಣುಮಕ್ಕಳು ಸುಖವಾಗಿದ್ದಾರೆಯೆ? ಖಂಡಿತವಾಗಿಯೂ ಇಲ್ಲ. ಇಲ್ಲಿಯೂ ಅವಳು ಒಂದುರೀತಿ ಖೈದಿ. ಅತ್ತೆ, ಮಾವ, ನಾದಿನಿ, ಮೈದುನ ಮತ್ತು ಗಂಡ ಇವರೆಲ್ಲರೂ ಹೇಳಿದಂತೆ ನಡೆಯಬೇಕು. ಇಲ್ಲದಿದ್ದಲ್ಲಿ ಇದು ನಮ್ಮ ಕುಟುಂಬಕ್ಕೆ ಅವಮಾನ ಎಂದು ಖಂಡಿಸುವರು. ಹೆಣ್ಣು ಅವಳು ಇಷ್ಟಪಟ್ಟಂತೆ ಒಂದುಕಡೆ ಹೋಗಬಾರದು, ಬರಬಾರದು, ತಿನ್ನಬಾರದು, ನಿಲ್ಲಬಾರದು. ಈ ಬಾರದು ಬಾರದುಗಳ ಮಧ್ಯೆ ಅವಳು ತನ್ನ ತನವನ್ನು ಕಳೆದುಕೊಳ್ಳುತ್ತಾಳೆ. ಕೆಲವು ಕಡೆ ಇದಕ್ಕೆ ವಿರುದ್ಧವಾದ ಪರಿಸ್ಥಿತಿ. ಮನೆಯಲ್ಲಿ ಎಲ್ಲರೂ ಅವಳನ್ನು ಇಷ್ಟಪಡುತ್ತಾರೆ. ಆದರೆ ಸ್ವತಂತ್ರವಾಗಿ ಆ ಹೆಣ್ಣು ಎಲ್ಲಿಯೂ ಹೋಗಬಾರದು ಗಂಡನ ಜೊತೆ ಹೋಗಬೇಕು, ಬರಬೇಕು, ಅವನು ಹೇಳಿದಂತೆ ನಡೆಯಬೇಕು. ಇಂತಹ ಪರಿಸ್ಥಿತಿಯಲ್ಲಿ ಅವಳು ಅಂತರಂಗದ ಆಸೆಗಳಿಗೆ ಬೆಲೆಯೇ ಇಲ್ಲವೆ? ಇಷ್ಟರ ನಡುವೆ ಹಣದ ದುರಾಸೆ ಇದ್ದವರು, ತವರು ಮನೆಯಿಂದ 'ತಾ' ಎನ್ನುವ ಆಜ್ಞೆಗೆ ಮಣಿದು, ಇತ್ತ ತವರಿನವರನ್ನು ಬಾಧಿಸಲು ಇಷ್ಟಪಡದೆ, ಅತ್ತ ಮನೆಯವರನ್ನು ಸಂತೋಷಪಡಿಸಲು ಆಗದೆ, ನರಳುವ ಹೆಣ್ಣುಮಕ್ಕಳೆಷ್ಟು? ಇಲ್ಲೂ ಅವಳು ಅಸ್ವತಂತ್ರಳು. ಒಬ್ಬರ ಸಂಪಾದನೆ/ದುಡಿಮೆಯಿಂದ ಜೀವನ ನಡೆಸುವುದು ದುರ್ಭರ ವಾಗಿರುವುದರಿಂದ, ಹೆಣ್ಣು ಈಗ ತಾನೂ ದುಡಿಯುವುದು ಅನಿವಾರ್ಯವಾಗಿದೆ. ಇಂತಹ ಸಂದರ್ಭಗಳಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಅತ್ತೆ ಅಥವಾ ತಾಯಿಯನ್ನು ಜೊತೆಯಲ್ಲಿ ಇಟ್ಟುಕೊಂಡಿರುತ್ತಾರೆ. ಮಕ್ಕಳ ಲಾಲನೆ ಪಾಲನೆ ವಯಸ್ಸಾದ ಅವರಿಗೆ ನಿಜಕ್ಕೂ ಕಷ್ಟಕರ. ಆದರೆ ಅವರು ಅದನ್ನು ಹೇಳಲು ಅಸಮರ್ಥರು. ಕೆಲ ಸಮಯ ವಯಸ್ಸಾದ ತಂದೆತಾಯಿಯರನ್ನು ನಿಕೃಷ್ಟವಾಗಿ ಕಾಣುತ್ತಾರೆ. ಮಕ್ಕಳನ್ನು ಸರಿಯಾಗಿ ಗಮನಿಸದಿದ್ದ ಪಕ್ಷದಲ್ಲಿ ಬಾಯಿಗೆ ಬಂದಂತೆ ಬೈಯ್ಯುತ್ತಾರೆ. ಅವರು ತನ್ನನ್ನು ಹೆತ್ತವರು ಎನ್ನುವುದನ್ನು ಮರೆತು, ಕೆಲಸದವರಂತೆ ಕಾಣುತ್ತಾರೆ. ಇಂತಹ ದುರದೃಷ್ಟ ತಂದೆತಾಯಿಯರಿಗೆ ಎಂದಿಗೆ ಮುಕ್ತಿ? ಇಂತಹ ತಾಯಿ, ಅತ್ತೆಯರೂ ಹೆಣ್ಣುಗಳೇ ಎಂದು ಮನವರಿತು ನಡೆಯುವುದು ಸೂಕ್ತವಲ್ಲವೇ?

20 ಶತಮಾನಗಳನ್ನು ಕಳೆದರೂ ನಾವಿನ್ನು ಇಂತಹ ಶೋಷಣೆಗಳಿಂದ ಮುಕ್ತಿಹೊಂದಿಲ್ಲ. ಹೆಣ್ಣು ಅಡಿಗೆಮನೆಗೆ ಮೀಸಲು ಎನ್ನುವ ಭಾವನೆಯಿಂದ ಹೊರಬಂದಿಲ್ಲ. ಹೆಣ್ಣು ಗಂಡಿಗೆ ಸರಿಸಮನಾಗಿ ದುಡಿದು ಮನೆಗೆ ಬಂದರೆ, ಗಂಡು ಕಾಲುಚಾಚಿ ಮಲಗಿಕೊಂಡು ಕಾಫೀ ತೆಗೆದುಕೊಂಡು ಬಾರೇ ಎಂದು ಆದೇಶಿಸುತ್ತಾನೆ. ಅದೇ ಹೆಣ್ಣು ತನಗೆ ಸಾಕಾಗಿದ್ದರೂ ಗಮನಿಸದೆ, ಅಡುಗೆ ಮನೆಗೆ ಹೋಗಿ ಕಾಫೀ ತಯಾರಿಸಿ ಅವನ ಮುಂದಿಡಬೇಕು. ಇದು ಯಾವ ನ್ಯಾಯ? ಅವಳು ಅವನ ಜೊತೆ ಹೆಗಲಿಗೆ ಹೆಗಲು ಕೊಟ್ಟು ದುಡಿದಿರುವುದಿಲ್ಲವೆ? ಅವಳಿಗೆ ವಿಶ್ರಾಂತಿ ಬೇಡವೆ? ಇಲ್ಲಿ ಇನ್ನು ಅಸ್ವತಂತ್ರಳು.

ಹೊರೆಗೆ ದುಡಿಯುವ ಮಹಿಳೆಗೆ ಕೆಲಸ ಒಂದು ವರ ಎಂದು ಹೇಳಬೇಕು. ಮನೆ ಮತ್ತು ಕೆಲಸ ಎರಡು ಕಡೆ ದುಡಿಯಬೇಕು. ಅವಳು ಹೆಂಡತಿ, ತಾಯಿ ಮತ್ತು ದುಡಿಯುವ ಮಹಿಳೆ ಈ ಮೂರು ಪಾತ್ರಗಳನ್ನು ನಿರ್ವಹಿಸುತ್ತಾಳೆ. ಎಲ್ಲಿ ಏರುಪೇರಾದರೂ ಅದು ವ್ಯವಸ್ಥಿತವಾಗಿರುವುದಿಲ್ಲ. ಈ ಮೂರು ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಅವಳು ಪಡುವ ಶ್ರಮ ಶ್ಲಾಘನೀಯ. ಮಕ್ಕಳಿಗೆ ತಂದೆ ಇಲ್ಲದಿದ್ದರೆ, ತಾಯಿ ಒಬ್ಬಳೇ ಜವಾಬ್ದಾರಿ ವಹಿಸಿ ಮಕ್ಕಳನ್ನು ಚನ್ನಾಗಿ ಬೆಳೆಸುತ್ತಾಳೆ. ಆದರೆ ಅದೇ ತಂದೆ, ಹೆಂಡತಿಯಿಲ್ಲದೆ ಸಂಸಾರ ನಡೆಸಲು ಮಕ್ಕಳನ್ನು ಸಾಕಲು ಅಸಮರ್ಥ. ಹೆಂಡತಿ ಸತ್ತ 3 ತಿಂಗಳಲ್ಲಿ ಇನ್ನೊಂದು ಮದುವೆಯಾಗುತ್ತಾನೆ. ಇದು ನಮ್ಮ ಸಮಾಜದ ರೀತಿ ನೀತಿ. ಅದೇ ಒಂದು ವಿಧವೆ ಮದುವೆಯಾದರೆ ಇನ್ನು ಆಡಿಕೊಳ್ಳುವವರು ಕಡಿಮೆಯಾಗಿಲ್ಲದ ಈ ಸಮಾಜದಲ್ಲಿ ಹೆಣ್ಣು ಇನ್ನು ಸ್ವಲ್ಪ ಹೆಚ್ಚು ಎಚ್ಚೆತ್ತುಕೊಳ್ಳಬೇಕು.

ಹೊಸ ಸಹಸ್ರಮಾನಕ್ಕೆ ಕಾಲಿಡುತ್ತಿರುವ ನಾವು, ಮುಂಬರುವ ದಿನಗಳಲ್ಲಿ ಹೆಣ್ಣು ಗಂಡ ಎಂಬ ಭೇದ ಭಾವವಿಲ್ಲದೆ, ಯಾರಿಗಿಂತ ಯಾರು ಹೆಚ್ಚಿಲ್ಲ, ಕಡಿಮೆಯಿಲ್ಲ ಎಂದು ಸಮಾನಭಾವದಿಂದ ನಡೆಯಬೇಕು. ಗಂಡು ಹೆಣ್ಣು ಸಮಾಜದ ಎರಡು ಕಣ್ಣುಗಳಿದ್ದಂತೆ. ಎರಡರಲ್ಲಿ ಒಂದು ಇಲ್ಲವಾದಲ್ಲಿ ಅದು ಕುರುಡು ಸಮಾಜವಾಗುವುದು. ಈಗಾಗಲೇ ಹೆಣ್ಣು ಎಲ್ಲಾ ಕ್ಷೇತ್ರಗಳಲ್ಲೂ ಗಂಡಿಗೆ ಸರಿಸಮನಾಗಿ ದುಡಿಯುತ್ತಿದ್ದಾಳೆ.

ಇನ್ನು ಹೆಚ್ಚಿನ ಸಂಖ್ಯೆಯಲ್ಲಿ, ಹೆಚ್ಚಿನ ಕ್ಷೇತ್ರಗಳಲ್ಲಿ ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಎತ್ತಿಹಿಡಿಯಬೇಕು. ಯಾವ ರೀತಿಯಲ್ಲೂ ನಾವು ಗಂಡಸರಿಗಿಂತ ಕಡಿಮೆಯಲ್ಲ ಎನ್ನುವುದನ್ನು ಸಾಧಿಸಿ ತೋರಿಸಬೇಕು.

ಓ ಎನ್ನ ಗೆಳತಿ

ನಾಗವೇಣಿ ಜೆ.

ಮನದಾಳದ ಬಯಕೆಯ
ತಿಳಿಸಲೇನೆ ಓ ಎನ್ನ ಗೆಳತಿ
ಪ್ರಿಯನಾಗಮಕ್ಕೆ ಕಾಯುತಿಹ
ಹೃದಯದಾಳದ ಮನ
ಓದಲೇನೆ ಓ ಎನ್ನ ಗೆಳತಿ
ನೀ ಸನಿಹಕೆ ಬಂದರೆ
ನಾವಿರ್ವರು ಈಜುವ
ಬಾರೆ ಸಾಗರದಾಳದಲಿ
ಮೀನಾಗಿ ಓ ಎನ್ನ ಗೆಳತಿ
ಪಡುವಣದ ರವಿಯ
ಜೊತೆ ಸಾಗರದ
ಅಲೆಗಳಲಿ ಆಡುವ
ಬಾರೆ ಓ ಎನ್ನ ಗೆಳತಿ
ಬೋರ್ಗರೆಯುವ
ಮಳೆಯಲಿ
ನೀ ಮಿಂಚಾಗಿ ನಾ
ಗುಡುಗಾಗಿ ಸುರಿಯುವ
ಬಾ ಓ ಎನ್ನ ಗೆಳತಿ
ಚಿಲುಮಿ ಎಂಬ
ಹೃದಯದಿ ನೀ
ನಾ ಜೋಡಿಹಕ್ಕಿಯಾಗಿ
ಮೀಯುವ ಬಾ
ಓ ಎನ್ನ ಗೆಳತಿ.

ದಲಿತ ಹೆಣ್ಣು ಮಕ್ಕಳ ಹಾಸ್ಟೆಲ್ ದುಸ್ಥಿತಿ

ದಲಿತರಿಗಾಗಿ ರೂಪಿಸಲಾಗಿರುವ ಅಭಿವೃದ್ಧಿ ಯೋಜನೆಗಳ ಪೈಕಿ ಪ್ರಧಾನವಾದುದೆಂದರೆ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಮತ್ತು ವಿದ್ಯಾರ್ಥಿ ವೇತನ ನೀಡಿಕೆ. ದಲಿತರನ್ನು ಸಶಕ್ತರನ್ನಾಗಿಸುವ ಪ್ರಮುಖ ಸಾಧನವೇ ಶಿಕ್ಷಣ. ಇದಿಲ್ಲದೇ ಹೋದರೆ ಉದ್ಯೋಗ ಮೀಸಲಾತಿಯೂ ಸೇರಿದಂತೆ ಎಲ್ಲಾ ರಕ್ಷಣಾ ಕ್ರಮಗಳೂ ನಿರುಪಯುಕ್ತವಾಗಿ ಬಿಡುತ್ತವೆ. ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಹಾಗೂ ವಿದ್ಯಾರ್ಥಿ ವೇತನ, ಹಾಸ್ಟೆಲ್ ಸೌಲಭ್ಯ ಇಲ್ಲದಿದ್ದರೆ ಈಗಲೂ ಬಹುತೇಕ ದಲಿತರು ಶಿಕ್ಷಣದಿಂದ ವಂಚಿತರಾಗೇ ಉಳಿಯುವ ಪರಿಸ್ಥಿತಿ ಇದೆ. ಈಗ ಸರಕಾರದ ಕಡೆಯಿಂದ ಅಷ್ಟೋ ಇಷ್ಟೋ ಭದ್ರತೆಗಳು ಜಾರಿಯಾಗುತ್ತಿರುವಾಗಲೇ ದಲಿತ ಮಕ್ಕಳು ಶಾಲೆಯನ್ನು ಅರ್ಧಕ್ಕೆ ಬಿಡುವ ಪ್ರಮಾಣ ಗಾಬರಿ ಹುಟ್ಟಿಸುವ ಹಾಗಿದೆ. ಇಂತಹ ಭದ್ರತಾ ಕ್ರಮಗಳು ಮೊಟಕು ಗೊಂಡಾಗ ಇನ್ನೆಂತಹ ಭೀಕರ ಪರಿಸ್ಥಿತಿ ಉಂಟಾಗಬಹುದು ಎಂಬುದನ್ನು ನಾವು ಊಹಿಸಬಹುದಾಗಿದೆ. ಒಂದು ವೇಳೆ ಹೀಗಾದರೆ ತಮ್ಮ ಬದುಕನ್ನು ಕಳೆದುಕೊಂಡರೆ ಆಶ್ಚರ್ಯವಿಲ್ಲ.

ದಲಿತ ಮಕ್ಕಳಿಗಾಗಿ ಸರಕಾರದಿಂದ ಸಿಗುವ ಅಷ್ಟೋ ಇಷ್ಟೋ ಸೌಲಭ್ಯಗಳಲ್ಲಿ ಹಾಸ್ಟೆಲ್ ವ್ಯವಸ್ಥೆ ಕೂಡಾ ಒಂದು ಪ್ರಮುಖವಾದ ಯೋಜನೆ. ಅದರಲ್ಲೂ ಶಿಕ್ಷಣದಲ್ಲಿ ಶೇಕಡಾವಾರು ಪಟ್ಟಿಯಲ್ಲಿ ಹಿಂದೆ ಸಂದಿರುವ ಹೆಣ್ಣುಮಕ್ಕಳಿಗೆ ಈ ಸೌಲಭ್ಯ ಬಹಳಷ್ಟು ಮುಖ್ಯವಾಗಿದೆ. ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸದಿರಲು ಬಡತನವನ್ನೇ ಮುಖ್ಯ ಕಾರಣವಾಗಿ ಮಾಡಿಕೊಂಡಿರುವ ಹೆತ್ತವರು ಚೇತರಿಸಿಕೊಳ್ಳಲು ಒಂದು ಚಿಕ್ಕ ಅವಕಾಶವಾಗಿದೆ. ವಿದ್ಯಾರ್ಥಿ ವೇತನದ ಜೊತೆಗೆ ಹೊಟ್ಟೆಗೆ ಅನ್ನ, ಬಟ್ಟೆ, ಹಾಗೂ ಇನ್ನಿತರ ಅವಶ್ಯ ವಸ್ತುಗಳಾದ ಪೇಸ್ಟು, ಸಾಬೂನು, ತಲೆಗೆ ಎಣ್ಣೆ ಎಲ್ಲವೂ ಈ ಹಾಸ್ಟೆಲ್‌ಗಳಲ್ಲಿ ಸಿಗುತ್ತದೆ. ಸರಕಾರದ ನಿಯಮಗಳ ಪ್ರಕಾರ ಪ್ರತಿ ಭಾನುವಾರ ರಾತ್ರಿ ಮಾಂಸ, ವಾರದಲ್ಲಿ 3 ದಿನ ಮೊಟ್ಟೆ ಕೊಡಬೇಕು. ಮಕ್ಕಳು ಆರೋಗ್ಯ ವಾಗಿರಬೇಕೆಂಬ ಉದ್ದೇಶದಿಂದ ಅವರಿಗೆ ಸಮತೋಲನ ಆಹಾರದ ಅವಶ್ಯಕತೆಯ ಪಟ್ಟಿ ಇದಾಗಿರುತ್ತದೆ.

ಆದರೆ ಕುಶಾಲನಗರದ ದಲಿತ ಹೆಣ್ಣುಮಕ್ಕಳ ಹಾಸ್ಟೆಲ್‌ನಲ್ಲಿ ನಡೆಯುತ್ತಿರುವುದು ಇದಕ್ಕೆ ವ್ಯತಿರಿಕ್ತವಾಗಿದೆ. ಇಲ್ಲಿ 5ನೇ ತರಗತಿಯಿಂದ 10ನೇ ತರಗತಿಯ ವರೆಗಿನ ಒಟ್ಟು 50 ಮಕ್ಕಳಿದ್ದು ಹಾಸ್ಟೆಲ್ ಮೇಲ್ವಿಚಾರಕಿಯಿಂದ ಅನುಭವಿಸುತ್ತಿರುವ ದೈಹಿಕ ಮತ್ತು ಮಾನಸಿಕ ಹಿಂಸೆ, ಹೊಟ್ಟೆಗೆ ಆಹಾರದ ಕೊರತೆ, ವಂಚನೆ, ಇದೆಲ್ಲದರಿಂದ ರೋಸಿಹೋದ ಹೆಣ್ಣುಮಕ್ಕಳು ತಮ್ಮ ದುಃಖವನ್ನು ದಲಿತ ನಾಯಕರೊಂದಿಗೆ ಹಾಗೂ ಪತ್ರಕರ್ತರೊಂದಿಗೆ ತೋಡಿಕೊಂಡಿದ್ದು; ಸಹಾಯಕ್ಕಾಗಿ ಅಂಗಲಾಚಿದ್ದು ಶೋಚನೀಯವಾಗಿತ್ತು.

ಈ ತೆರನಾದ ಹಿಂಸೆ, ಭ್ರಷ್ಟಾಚಾರ ದಲಿತ ಹೆಣ್ಣುಮಕ್ಕಳ ವಿದ್ಯಾರ್ಥಿ ನಿಲಯದಲ್ಲಿ ನಡೆಯುತ್ತಿರುವುದಕ್ಕೆ ಸರಕಾರದ ಆಡಳಿತ ಯಂತ್ರದಲ್ಲಿರುವ ದೋಷವೇ ಕಾರಣ. ತಮ್ಮ ಹಣದ ದಾಹ ತೀರಿಸಿಕೊಳ್ಳುವುದಕಾಗಿ ಈ ಪ್ರಭಾತಿ ಮೇಲ್ವಿಚಾರಕಿಯನ್ನು (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಹರಿಜನ-ಗಿರಿಜನ ಮಕ್ಕಳಿಗಾಗಿ ನಡೆಸುತ್ತಿರುವ ಶಿಶುವಿಹಾರದಲ್ಲಿ) ದುಡಿಯುವ ಮಹಿಳೆ ತಾಲ್ಲೂಕು ಮತ್ತು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಸರಕಾರಿ ಅಧಿಕಾರಿಗಳು ಸೂತ್ರದ ಗೊಂಬೆಯಾಗಿ ಬಳಸುತ್ತಿದ್ದ ಈಕೆ ತನ್ನನ್ನು ತಾನು ಉಳಿಸಿಕೊಳ್ಳುವುದಕ್ಕಾಗಿ ಸುಳ್ಳು ಲೆಕ್ಕಗಳನ್ನು ಸೃಷ್ಟಿಮಾಡಿ ಮಕ್ಕಳನ್ನು ವಂಚಿಸುತ್ತಿರುವುದು ಮತ್ತು ಅವರನ್ನು ಹೆದರಿಸಿ ಬಾಯಿಮುಚ್ಚಿಸಲು ಪ್ರಯತ್ನಿಸುತ್ತಿರುವುದು ಆಕೆ ಬಲಿಪಶುವಾಗಿರುವುದನ್ನು ತೋರಿಸಿ ಕೊಡುತ್ತದೆ.

ಇಂತಹ ಶೋಷಣೆಯು ಚಿಕ್ಕ ವಯಸ್ಸಿನ ಈ ಹೆಣ್ಣುಮಕ್ಕಳ ಮನಸ್ಸಿನ ಮೇಲೆ ತೀವ್ರ ಪರಿಣಾಮ ಬೀರಲಿದೆ. ಅವರು ದಿನ ನಿತ್ಯದ ಚಟುವಟಿಕೆಗಳಲ್ಲಿ ಆಸಕ್ತಿ ಕಳೆದುಕೊಳ್ಳಬಹುದು. ಮಾನಸಿಕ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಬಹುದು. ಶಾಲೆಯ ದಿನಚರಿಯಲ್ಲಿ ಆಸಕ್ತಿ ಕಳೆದುಕೊಳ್ಳಬಹುದು. ಈ ನರಕಯಾತನೆಗೆ ತಮ್ಮ ತಂದೆ-ತಾಯಿಗಳೇ ಕಾರಣವೆಂದುಕೊಂಡು ಅವರನ್ನೇ ದ್ವೇಷಿಸಬಹುದು. ಆದುದರಿಂದ ಇಂತಹ ವಸತಿ ನಿಲಯಗಳಲ್ಲಿ ಮೇಲ್ವಿಚಾರಕಿಯರಾಗಿ ದುಡಿಯುವವರು ಮಕ್ಕಳ ಮೇಲೆ ಮಮತೆ, ಆಸಕ್ತಿ ಇರುವವರಾದರೆ; ಮಕ್ಕಳಿಗೆ ತಾಯಿಯಾಗಿಯೇ ಅಕ್ಕನಾಗಿಯೋ ಇರುವವರಾದರೆ ಅವುಗಳು ತಮ್ಮೆಲ್ಲಾ ನೋವನ್ನು ಮರೆಯಲು ಸಹಾಯಕಾರಿಯಾಗುವುದು.

ಆದುದರಿಂದ ಸಂಬಂಧಪಟ್ಟವರು ಭ್ರಷ್ಟಾಚಾರದ ಬಗ್ಗೆ ಸೂಕ್ತ ತನಿಖೆ ನಡೆಸಿ ಇನ್ನು ಮುಂದೆ ಇಂತಹ ಹಾಸ್ಟೆಲುಗಳಲ್ಲಿ ಹೆಣ್ಣುಮಕ್ಕಳು ನರಕಯಾತನೆ ಅನುಭವಿಸುವುದನ್ನು ತಪ್ಪಿಸುವುದು ಆದ್ಯ ಕರ್ತವ್ಯವಾಗಿದೆ.

ಜಯಶ್ರೀ, ಕುಶಾಲನಗರ

"ಗೌರಕ್ಕ ಮೆಂಬರಾಗಿದ್ದು"

ರಾಜೇಶ್ವರಿ ಎಚ್. ಎಸ್.

ಗೌರಕ್ಕ ಬೆಳಿಗ್ಗೆ ಎದ್ದರೆ ನೆಲಕ್ಕೆ ತಲೆಯೂರುವುದು ರಾತ್ರಿ ಹನ್ನೊಂದಕ್ಕೆ. ಕೊಟ್ಟಿಗೆ ಮನೆಯಂಗಳ ಗುಡಿಸಿ, ಮಗ ತಂದಿಟ್ಟಿರುವ ಪೇಸ್ಟನ್ನು ಬೆರಳ ತುದಿಗೆ ಹಚ್ಚಿಕೊಂಡು ಹಲ್ಲುಜ್ಜಿ, ಬೊಗಸೆ ತುಂಬಾ ನೀರನ್ನು ಹಾಕಿಕೊಂಡು ಮುಖ ತೊಳೆದು, ಕರುವನ್ನು ಕೆಚ್ಚಲಿಗೆ ಬಿಟ್ಟು ಹಾಲು ಕರೆಯುತ್ತಾಳೆ. ಒಲೆಯಲ್ಲಿನ ಬೂದಿ ತೆಗೆದು, ಬೆಂಕಿ ಹಾಕಿ ಟೀ ಕಾಯಿಸುತ್ತಾಳೆ. ಸೊಸೆ ಏಳುವುದರಲ್ಲಿ ಟೀ ಕಾಯಿಸುವುದು ಗೌರಕ್ಕನ ಕೆಲಸ. ಟೀ ಕಾಯಿಸಿ ಕುಡಿದು ಸೊಸೆಯನ್ನು ಎಬ್ಬಿಸಿ ಹಸುಗಳನ್ನು ಹೊಲಕ್ಕೆ ಅಟ್ಟಿಕೊಂಡು ಹೋಗುತ್ತಾಳೆ. ಹೊರಲಾರದ ಒಂದು ದೊಡ್ಡ ಹುಲ್ಲಿನ ಹೊರೆಯನ್ನು ತರುವುದರಲ್ಲಿ ಹನ್ನೊಂದು ಗಂಟೆಯಾಗುತ್ತದೆ. ಅತ್ತೆ ಮನೆಗೆ ಬರುವುರಲ್ಲಿ ಸೊಸೆ ಸಾರು ಮಾಡಿ ಹಿಟ್ಟು ತಿರುವಿಟ್ಟಿರುತ್ತಾಳೆ.

ಗೌರಕ್ಕ ತಾನು ಆದಿನ ಮೀಟಿಂಗ್‌ಗೆ ಹೋಗ ಬೇಕಾದುದರಿಂದ ಸಣ್ಣ ಹುಲ್ಲಿನ ಹೊರೆಯನ್ನು ಹೊತ್ತು ತಂದು ಸೊಸೆ ತಟ್ಟೆಯಲ್ಲಿ ಹಾಕಿದ ಹಿಟ್ಟನ್ನು ಗಬಗಬ ತಿನ್ನುತ್ತಾ, ಮಗನ ಮಾತುಗಳನ್ನು ಮೆಲುಕು ಹಾಕುತ್ತಾಳೆ. "ಹದಿನೈದು ದಿನಕ್ಕೆ 20 ರೂ. ಕಟ್ಬೇಕಾ, ನಿನಗೆ ಮಾಡೋಕೆ ಕೆಲ್ಸಾ ಇಲ್ವಾ, ಮೀಟಿಂಗ್‌ಗೆ ಬೇರೆ ಕಡ್ಡಾಯವಾಗಿ ಹೋಗ್ಬೇಕು ಅಂತ ಅಂತೀಯಾ, ನೀನು ಸುಮ್ನೆ ಇರವ್ವ. 20 ರೂಪಾಯಿ ಕಟ್ಟೋದು ಮಹಾ ದೊಡ್ಡ ಕೆಲ್ಸಾ ಅಲ್ಲ, ಈ ಊರಿನ ಜನರು ಸರ್‍ಯಾಗೆ ಇಲ್ಲ. ಅವೆಲ್ಲಾ ನಮ್ಗ್ಯಾಕೆ. ನನ್ನ ಕೇಳದೆ ಹ್ಯಂಗೆ ಹೋಗಿ ನೀನು ಕಟ್ಟಿದೆ? ಇವೊತ್ತು ಹೋಗಿ ಅದನ್ನು ವಾಪಸ್ಸು ತೆಗೆದುಕೊಂಡು ಬಾ" ಮಗ ತಾಕೀತು ಮಾಡಿದ್ದ.

ಹದಿನೈದು ದಿನದ ಹಿಂದೆ ಆ ಊರಿನಲ್ಲಿ ಸ್ವಸಹಾಯ ಗುಂಪು ರಚಿಸಲು ಸೇರಿದ್ದ ಸಭೆಯಲ್ಲಿ ಗೌರಕ್ಕ ತಾನೂ ಸ್ವಯಿಚ್ಛೆಯಿಂದ ಮೆಂಬರಾಗಿ 20 ರೂಪಾಯಿ ಕಟ್ಟಿದ್ದಳು. ವಾಪಸ್ಸು ಮನೆಗೆ ಹೋಗಿ ಮಗನ ಬಳಿ ವಿಷಯ ತಿಳಿಸುತ್ತಿದ್ದ ಹಾಗೆ ಮಗ ಬಾಯಿಗೆ ಬಂದ ಹಾಗೆ ಬೈಯ್ದಿದ್ದ. ಮಗನ ಬಳಿ ಬೈಸಿಕೊಂಡ ಗೌರಕ್ಕ "ನಾನು ಹಗಲು ರಾತ್ರಿ ದುಡೀತೀನಿ, ತಂದೆ ಇಲ್ದಿರೊ ಮಗನ್ನ ಸಾಕಿ ದೊಡ್ಡೋನ್ನ ಮಾಡಿ ಮದುವೆ ಮಾಡ್ದೆ. ನನ್ನ ಇಷ್ಟದ ಪ್ರಕಾರ 20 ರೂಪಾಯಿ ಕಟ್ಟೋದಕ್ಕೆ ಮಗನ ಹತ್ರ ಕೈ ಚಾಚ ಬೇಕು? ಮನಸ್ಸಿನಲ್ಲೇ ಕೊರಗುತ್ತಿದ್ದಳು.

ಮಗ ಒಂದು ಮಾತಾಡಿದ್ರೆ ಕಡ್ಡಿ ತುಂಡು ಮಾಡಿದ ಹಾಗೆ. ಬದಲಾಯಿಸುವ ಜಾಯಮಾನ ಅವನದಲ್ಲ, ಮಗನ ಮಾತು ಕೇಳದೆ ಕಟ್ಟಬೇಕು ಅಂದ್ರೆ, ಕಾಸನ್ನ ನನ್ನ ಕೈಯಲ್ಲಿ ಇಟ್ಟುಕೊಳ್ಳಬೇಕು. ಅದು ಹೇಗೆ ಸಾಧ್ಯ? ಹದಿನೈದು ದಿನಕ್ಕೊಮ್ಮೆ ಅವನ ಹತ್ರ ಕೈ ಚಾಚಬೇಕು. ವಾಪಸ್ಸು ತೆಗೆದುಕೊಳ್ಳೋದು ಕಷ್ಟದ ಕೆಲ್ಸಾ ಅಲ್ಲ. ಆದ್ರೆ ಕಟ್ಟಿಕೊಂಡು ಹೋದ್ರೆ, ನನ್ನ ಕಷ್ಟಕ್ಕೆ ಆಗುತ್ತೆ, ಹೀಗೆ ಮನಸ್ಸು ಗೊಂದಲದಿಂದ ಒಡ್ದಾಡುತ್ತಿತ್ತು.

ಗೌರಕ್ಕ ತನ್ನ ಮನಸ್ಸಿನ ಗೊಂದಲವನ್ನು ಚನ್ನಮ್ಮನ ಹತ್ತಿರ ಹೇಳಿಕೊಂಡ್ಳು. ಚನ್ನಮ್ಮ "ನಿನ್ನ ಹೊಟ್ಟೆಗೆ ಹಿಟ್ಟು ನೀನು ಉಣ್ಣುತ್ತಿಯೋ, ನಿನ್ನ ಮಗ ಉಣ್ಣುತ್ತಾನೋ" ಬೆಳಗ್ಗೆಯಿಂದ ಒಂದು ನಿಮಿಷ ಕುಂಡಿ ನೆಲಕ್ಕೆ ಊರದ ಹಾಗೆ ಗೆಯ್ಯುತ್ತೀಯಾ? ಇಪ್ಪತ್ತು ರೂಪಾಯಿ ಕಟ್ಟಾಕೆ ಅಳತೀಯಲ್ಲ? ಮಗ ಧರ್ಮಕ್ಕೆ ಕೊಡ್ತಾನಾ? ಮಗನ ಮಾತು ಕೇಳಿ ವಾಪಸ್ಸು ತಗೊಂಬ್ಯಾಡ. ನಾಳೇ ಏನಾದ್ರೂ ನಿನ್ನ ಕಷ್ಟಕ್ಕೆ ಆಗ್ತದೆ. ಅವರಿವರ ಮಾತು ಕೇಳ್ಬೇಡ ಎಂದು ಒಂದೇ ತೀರ್ಮಾನ ಕೊಟ್ಟುಬಿಟ್ಟಳು.

ಗೌರಕ್ಕನಿಗೆ ಚನ್ನಮ್ಮ ಹೇಳುವುದು ಸರಿಯೆನಿಸಿತು. ಮತ್ತೆ ರಾತ್ರಿ ಮಗ ಊಟಕ್ಕೆ ಕುಳಿತಾಗ ಈ ವಿಷಯವನ್ನು ಮೆಲ್ಲಗೆ ಎತ್ತಿದಳು. "ಹಾಲಿನ ಕಾಸಲ್ಲೇ ಹದಿನೈದು ದಿನಕ್ಕೆ 20 ರೂಪಾಯಿ ಕಟ್ಟತ್ತೀನಿ, ನಾಳೇ ನನ್ನ ಕಷ್ಟಕ್ಕೆ ಆಗುತ್ತೆ" ಮೆಲ್ಲಗೆ ತನಗೆ ಕೇಳಿಸದ ಹಾಗೆ ನುಡಿದಳು. ಬಾಯಲ್ಲಿ ತುತ್ತಿಡುತ್ತಿದ್ದ ಮಗ ಕೆಕ್ಕರಿಸಿ ತಾಯಿಯನ್ನು ನೋಡುತ್ತಾ, "ನಮಗೆ ಇವೆಲ್ಲಾ ಬ್ಯಾಡಮ್ಮ, ನಾನು ನಿನಗೆ ಕಡಿಮೆ ಮಾಡಿರುವುದಾದರೂ ಏನು? ನಿನ್ನ ಕಷ್ಟ ಸುಖ ನೋಡೋಕೆ ನಾನಿಲ್ವೆ" ಹೇಳುತ್ತಾ ಕೈತೊಳೆದು ಎದ್ದು ಹೊರನಡೆದ.

ಮಗನಿಗೆ ಎದುರುತ್ತರ ಕೊಡಲಾಗದೇ ಗೌರಕ್ಕ, ತಾನು ಕಟ್ಟಿರುವ ದುಡ್ಡನ್ನು ವಾಪಸ್ಸು ತೆಗೆದುಕೊಳ್ಳುವುದೇ ಸರಿಯೆಂದು ತೀರ್ಮಾನಿಸಿ ಅಂದಿನ ಮೀಟಿಂಗ್‌ಗೆ ಹೋದಳು.

ಮನೆ ಮನೆಗೆ ಹತ್ತು ಸಾರಿ ತಿರುಗಿ ಬನ್ನಿ ಎಂದು ಕರೆದ್ರು ನೀವು ನಡೀರಿ ಈಗ ಬಂದ್ವಿ ಎನ್ನುತ್ತಿದ್ದ ಹೆಂಗಸರೆಲ್ಲಾ, ತಡವಾಗಿ ಬಂದ್ರೆ ಫೈನ್ ಕೊಡಬೇಕಾಗುತ್ತೆ ಅಂತ ಗಂಟೆ ಹೊಡೆಯುತ್ತಿದ್ದ ಹಾಗೆ ಇಸ್ಕೂಲು ಹುಡುಗ್ರು ಓಡೋಹಾಗೆ ಒಟ್ಟೊಟ್ಟಾಗಿ ಮೀಟಿಂಗ್‌ಗೆ ಬಂದ್ರು.

ಕಾರ್ಯಕರ್ತೆಯೊಬ್ಬರು ಸ್ವಸಹಾಯ ಗುಂಪಿನ ನಿಬಂಧನೆಗಳನ್ನು ಮತ್ತೊಮ್ಮೆ ವಿವರಿಸಿ ಹೇಳುತ್ತಿದ್ದ ಹಾಗೆ ಗೌರಕ್ಕ, "ನಾನು ಕಟ್ಟಿರೊ ದುಡ್ನ ವಾಪಸ್ಸು ಕೊಡಿ ನಮ್ಮ ಮಗ ಬ್ಯಾಡ ಅಂತಾರೆ" ಎಂದು ಹೊರಗೆ ಬರಲಾರದ ಧ್ವನಿಯನ್ನು ಬಲವಂತದಿಂದ ಹೊರತೆಗೆದು ಹೇಳಿದ್ಲು.

ಅವಳ ಉಸಿರು ಈಚೆ ಬರುತ್ತಿದ್ದ ಹಾಗೆ, ಉಳಿದ ಹೆಂಗಸರೆಲ್ಲಾ, "ವಾಪಸ್ಸು ತಗೋಳೋದಾದ್ರೆ ಯಾಕೆ ಕಟ್ಟಿದೆ? ಮೊದ್ಲೆ ಯೋಚನೆ ಮಾಡಿ ಕಟ್ಬೇಕಾಗಿತ್ತು ಮಗ ಏನಂತಾನೆ? ಹೊತ್ತಾರೆ ಸಂಜೆ, ಹೊತ್ತಾರೆ ಸಂಜೆ ನೀನು ದುಡಿಯೋದಿಲ್ವಾ, ನಿನ್ನ ಕಷ್ಟಕೆ ಆಯ್ತದೆ ಸುಮ್ನಿರು. ಥಾಲಿನ ದುಡ್ನಾಗೆ ಇಪ್ಪಿಪ್ಪತ್ತು ಕಟ್ಟು ನಿಂಗೆ ಅಷ್ಟು ಸ್ವಸಂತ್ರ ಇಲ್ವಾ?" ಎನ್ನುತ್ತಾ ಒಮ್ಮೆಲೇ ಒಂದೇ ಉಸಿರಿನಲ್ಲಿ ಜನಗಣಮನ ಹಾಡಿದರು.

ಗೌರಕ್ಕಂಗೆ ಒಳಗಿನಿಂದ ಧೈರ್ಯ ಬಂತು. ಮಗ ಏನಾರಾ ಅನ್ಲಿ, ನಾನು ಮೆಂಬರ್ ಆಗೋದೆ ಸೈ ಎಂದು ಮನಸು ಮಾಡಿ ಉಡಿಯಲ್ಲಿದ್ದ ಮುದುಡಿದ ಎರಡು ಹತ್ತರ ನೋಟುಗಳನ್ನು ಎರಡು ಭಾರಿ ಎಣಿಸಿ ಸಭೆಯ ಮುಂದಿಟ್ಟಳು.

●

ವಿಚ್ಛೇದನ

ಒಳ ಹೊರಗನ್ನೆಲ್ಲಾ ಜಾಲಿಸಿ
ಖಾಲಿಮಾಡಿ ಹೊಟ್ಟೆ ತುಂಬ
ಉಂಡು ಬಿಟ್ಟು ಹೋದವನಿಗೆ
ವಿಚ್ಛೇದನ !

ಅಲ್ಲಿ ಇಲ್ಲಿ ಎಳೆದಾಡಿ
ಹರಿದುಹೋದ ಕಚ್ಚೆಗೆ
ಸೂಜಿಯಿಲ್ಲ ದಾರವಿಲ್ಲ
ಹೊಲಿಗೆಹಾಕಲು ಹೊತ್ತಿಲ್ಲದವನಿಗೆ
ವಿಚ್ಛೇದನ !!

ಒಣಜಂಭ ಒಣ ಪ್ರತಿಷ್ಠೆಗಳ
ಮಾಯಾಲೋಕಕ್ಕೆ ಒಳಗಾಗಿ
ವಾಸ್ತವದ ನೆಲೆಯಿಂದ ದೂರ
ಉಳಿದವನಿಗೆ ಇನ್ನೇನು
ವಿಚ್ಛೇದನ !!!

ಅಜ್ಜಹಾಕಿದ ಆಲ
ಬೀಳು ಬಿಟ್ಟಿಹುದು ಆಳ
ರೋಗಗ್ರಸ್ಥ ವ್ಯವಸ್ಥೆಯ ಪಟ್ಟಭದ್ರ
ಹಿತ ರಕ್ಷಣೆಯ ಬಯಕೆಗೆ
ವಿಚ್ಛೇದನ !!!!

ಎಸ್. ನಾಗರತ್ನ

ಸೂಜಿ ಹುಡುಕುವ ಅಜ್ಜಿ

ರೂಪ, ಹಾಸನ

ಕಳೆದು ಹೋಗಿಹ ಸಣ್ಣ ಕಣ್ಣಿನ ಸೂಜಿ
ಹುಡುಕುತ್ತಿದ್ದಾಳೆ ಅರೆಗುರುಡಿನ ಅಜ್ಜಿ!
ಮೂಲೆ ಮೂಲೆ ಸಂದಿಗೊಂದಿ
ತಡವುತ್ತಾ, ಎಡವುತ್ತಾ
ಅಸಂಬದ್ಧ ಗೊಣಗುತ್ತಾ
ಅಪ್ರಚಲಿತ ಜಾನಪದ ಗೀತೆ ಗುನುಗುತ್ತಾ
ಹರಿದ ಸೀರೆ ತುಂಡು
ತೇಪೆಗೊಂದಿಷ್ಟು ಅರಿವೆ ಹಿಡಿದು
ಮಸುಕು ಕಣ್ಣೊಳಗೆ
ಮಬ್ಬು ಚಿತ್ರಗಳು ಮೂಡಿ
ಮರೆಯಾಗುತಿರಲು
ಇವಳು ಬಿಡದೆ ಸೂಜಿ ಹುಡುಕುತ್ತಾಳೆ!
ಅದ್ಭುತಗಳ ಸೃಷ್ಟಿಸುವ ಅಲ್ಲಾವುದ್ದೀನನ
ಜಾದೂದೀಪವೇ ಕೈಯೊಳಗೆ ಹಿಡಿದಂತೆ
ಮಿಣುಕು ಚಿಮಣಿ ಬುಡ್ಡಿಯ
ಮೈನೇವರಿಸುತ್ತಾ ಸೂಜಿ
ಹುಡುಕಲು ಆಜ್ಞಾಪಿಸುತ್ತಾಳೆ.
ಕಾಣದ ಕಣ್ಣು ಮತ್ತಷ್ಟು ಅರಳರಳಿಸಿ ಕಾಯುತ್ತಾಳೆ!
ಸೂಜಿಗಾಗಿ ನೆಲ ಸಾರಿಸುವಾಗ
ಚುಚ್ಚಿದ ಸೂಜಿ ಮೊನೆ ಗಬಕ್ಕನೆ ಹಿಡಿದು
ಹಿಡಿ ಮುಷ್ಠಿಯೊಳಗೆ
ಇಡಿ ಬದುಕು ಸಿಕ್ಕಂತೆ ಸಂಭ್ರಮಿಸುತ್ತಾಳೆ!
ಹೌದು, ಹರಿದ ಸೀರೆಗೆ
ತೇಪೆ ಬೇಡವೇ?

ಓದುಗರ ಅನಿಸಿಕೆ

ಹಲವು ಗೆಳತಿಯರು ಸೇರಿ ಪ್ರಾರಂಭಿಸಿ, ನಡೆಸುತ್ತಿರುವ 'ಮಾನಸ'ದ ಬಗೆಗೆ ಓದಿ ಹೆಮ್ಮೆ ಎನಿಸಿತು. ನಿಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಮಾನಸದ ಪ್ರತಿಯೊಂದು ಪುಟವೂ ಸ್ತ್ರೀವಾದದ ಪ್ರತೀಕದಂತಿದ್ದು ಲೇಖನಗಳು, ವರದಿಗಳು ವಿಚಾರ ಯೋಗ್ಯವೂ, ಸಂಗ್ರಾಹ್ಯವೂ ಆಗಿವೆ. ಮಾನಸಕ್ಕೆ ನನ್ನ ಮಿತಿಯಲ್ಲಿ, ಯಾವುದೇ ಸಹಾಯ ಮಾಡಲು ನಾನು ಸಿದ್ಧಳಿದ್ದೇನೆ. ನನ್ನ ಕೆಲವು ಗೆಳತಿಯರನ್ನು ಚಂದಾದಾರರನ್ನಾಗಿಸಲು ಪ್ರಯತ್ನಿಸುತ್ತೇನೆ. ಸಂಚಿಕೆಗೆ ಉಪಯುಕ್ತ ಮಾಹಿತಿಗಳನ್ನು ಕಳಿಸುತ್ತೇನೆ. ಮಹಿಳಾ ಶೋಷಣೆಯ ಕುರಿತು ಬರೆಯುವುದರ ಜೊತೆಗೆ, ಶೋಷಣೆಯನ್ನು ಎದುರಿಸಿ ಗೆದ್ದ ಮಹಿಳೆಯರ ಬಗೆಗೂ, ಸ್ವಪ್ರಯತ್ನದಿಂದ ಉನ್ನತವಾದುದನ್ನು ಸಾಧಿಸಿದ ಮಹಿಳೆಯರ ಬಗೆಗೂ ಮಾನಸದಲ್ಲಿ ಲೇಖನಗಳು ಬಂದರೆ ಒಳ್ಳೆಯದೆಂದು ನನ್ನ ಒಂದು ಅನಿಸಿಕೆ. ಇದರಿಂದ ಇತರ ಮಹಿಳೆಯರಿಗೂ ಸ್ಫೂರ್ತಿ ಸಿಕ್ಕಬಹುದು. ಶೋಷಣೆಯ ವಾಸ್ತವ ಚಿತ್ರಣದ ಜೊತೆಗೆ ಅದನ್ನು ನಮ್ಮ ಮಿತಿಗಳಲ್ಲೇ ಎದುರಿಸುವ ಬಗೆಯನ್ನು ತಿಳಿಸಿದರೆ ಹೆಚ್ಚು ಉಪಯುಕ್ತವಲ್ಲವೇ?

- ರೂಪಾ, ಹಾಸನ.

❑ ❑ ❑

"ಮಾನಸ" ನಮ್ಮೆಲ್ಲರ ಮಾನಸಿಕ ಸ್ಥೈರ್ಯದ ಪ್ರತೀಕ, ಹೀಗೆ ಬೆಳೆಯುತ್ತಿರಲಿ.

- ಚಂದ್ರಕಲಾ, ನಂದಾವರ

❑ ❑ ❑

ಮಾನಸ ಪತ್ರಿಕೆ ಬಹಳ ಚೆನ್ನಾಗಿದೆ. ಮಹಿಳೆಯರ ಮೇಲೆ ನಿಮಗಿರುವ ಕಾಳಜಿ ಕಂಡು ಹೃದಯ ತುಂಬಿ ಬಂತು. "ಹೆಣ್ಣಿಗೆ ಹೆಣ್ಣೇ ಶತ್ರು" ಎನ್ನುವ ಹಳೇ ಕಾಲದ ಉಕ್ತಿಯನ್ನು ಸುಳ್ಳೆಂದು ಸಾಬೀತು ಮಾಡಿದ್ದೀರಿ. 'ಹೆಣ್ಣಿನ ಸಮಸ್ಯೆ ಪರಿಹರಿಸುವ ಅವಳನ್ನು ಒಟ್ಟುಗೂಡಿಸಿ ಅವಳಿಂದಲೇ ಅವಳ ಸಮಸ್ಯೆ ಪರಿಹರಿಸಲು ಪ್ರಯತ್ನಿಸುವ ನಿಮ್ಮೆಲ್ಲರ ಕಾರ್ಯ ಪ್ರಶಂಸನೀಯ. ಇದಕ್ಕಾಗಿ ನಿಮಗೆ ಹಾಗೂ ನಿಮ್ಮ ಬಳಗಕ್ಕೆ ವಂದನೆಗಳು. ಮಹಿಳೆಯರ ಈ ಪತ್ರಿಕೆ ಇನ್ನೂ ಹೆಚ್ಚು ಪ್ರವರ್ಧಮಾನಕ್ಕೆ ಬರಲಿ ಎಂದು ಹಾರೈಸುತ್ತೇನೆ.

- ಸುಮಾ ಮೂರ್ತಿ

❑ ❑ ❑

'ಮಾನಸ' ಮಾಸಿಕದ ಇತ್ತೀಚಿನ ಹಲವಾರು ಸಂಚಿಕೆಗಳನ್ನು ನಾನು ಓದಿ ಮೆಚ್ಚಿಕೊಂಡಿದ್ದೇನೆ. ಅಕ್ಟೋಬರ್ 1999ರ 'ಮಾನಸ' ಸಂಚಿಕೆಯಲ್ಲಿನ ಎಚ್. ಎಸ್. ರಾಜೇಶ್ವರಿ ಅವರ ಲೇಖನ 'ನಾವು ಎಸ್.ಸಿ. ಆಗಿ ಹುಟ್ಟಬೇಕಾಗಿತ್ತು" ಪರಿಣಾಮಕಾರಿಯಾಗಿ ಮೂಡಿಬಂದಿದೆ. ಒಂದು ನೈಜ್ಯ ಘಟನೆಯನ್ನು ಆಡು ಭಾಷೆಯಲ್ಲಿ ದಾಖಲಿಸಿರುವ ರೀತಿ ಚೆನ್ನಾಗಿ ಮೂಡಿ ಬಂದಿದೆ.

ಲೇಖನ ಯಾವೊಂದು ಪೂರ್ವಗ್ರಹ ಪೀಡಿತವು ಆಗಿರದೆ. ಘಟನೆಯನ್ನು ಯತಾವತ್ತಾಗಿ ದಾಖಲಿಸಿ ತೀರ್ಮಾನವನ್ನು ಓದುಗರಿಗೆ ಬಿಟ್ಟಿರುವುದು ನನಗೆ ಲೇಖನ ಮೆಚ್ಚುಗೆ ಆಗಲು ಕಾರಣವಾಯಿತು. ಮಹಿಳೆಯರ ಅದರಲ್ಲಿಯೂ ಗ್ರಾಮೀಣ ಮಹಿಳೆಯರ ಸಮಸ್ಯೆಯತ್ತ ಮಾನಸ ಅವಲೋಕನ ನಡೆಸಿರುವುದು ಶ್ಲಾಘನೀಯ!

ಮಾನಸ ಪತ್ರಿಕೆಗೆ ಕಾರಣಕರ್ತರಾದ ಎಲ್ಲಾ ಮಹಿಳೆಯರು ಅಭಿನಂದನಾರ್ಹರು!

- ಕೆ. ಬಿ. ವೀರಣ್ಣ ಕಣ್ಣಾಗಾಲ

❑ ❑ ❑

'ವಾಟರ್' ಸುತ್ತಿದ ಬೆಂಕಿ

ನಿರ್ಮಾಪಕ ಡೇವಿಡ್ ಹ್ಯಾಮಿಲ್‌ಟನ್ ದಿಕ್ಕುಗೆಟ್ಟ ವರಂತಾಗಿಬಿಟ್ಟಿದ್ದಾರೆ. ಇಂಡಿಯಾದಲ್ಲಿ 'ವಾಟರ್' ಸಿನಿಮಾ ಚಿತ್ರೀಕರಿಸುವುದು ಇಷ್ಟವಿಲ್ಲದಿದ್ದರೆ ಅವರು ಅನುಮತಿ ನೀಡಿದ್ದೇಕೆ? ಎಂಬುದು ಇವರ ಅಳಲು. ಬಹುಶಃ ಇನ್ನು ಭಾರತದಲ್ಲಿ ಚಿತ್ರೀಕರಣ ನಡೆಸುವುದಕ್ಕೆ ಕೂಡಾ ಈತ ಹೆದರುವಂತಾಗಿದೆ. ವಿಧವೆಯ ಪಾತ್ರ ಮಾಡುತ್ತಿರುವ ನಂದಿತಾ ದಾಸ್ ಚಿತ್ರೀಕರಣ ಹಾಳು ಮಾಡುತ್ತಿರುವುದು ರಾಜಕೀಯ ಉದ್ದೇಶವಾಗಿದೆ ಎನ್ನುತ್ತಾರೆ. 'ವಾಟರ್' ದೀಪಾ ಮೆಹ್ತಾ ರವರ ಮೂರನೆಯ ಚಿತ್ರ. 'ಫೈರ್', 'ಅರ್ಥ್' ಉಂಟು ಮಾಡಿದ ಗೊಂದಲಮಯ ವಾತಾವರಣವನ್ನೇ 'ವಾಟರ್' ಕೂಡಾ ಉಂಟುಮಾಡಿದೆ. 'ವಾಟರ್' ಚಿತ್ರವು ಪ್ರಾರಂಭದಿಂದಲೇ ವಿವಾದದ ಸುಳಿಯಲ್ಲಿ ಸಿಕ್ಕಿ ಬಿದ್ದಿದೆ. ದೀಪಾ ಮೆಹ್ತಾರವರಿಗೆ ಜೀವ ಭಯದ ಬೆದರಿಕೆ ಹಾಕತೊಡಗಿದ್ದಾರೆ. ಉತ್ತರ ಪ್ರದೇಶದಲ್ಲಿ ಚಿತ್ರೀಕರಣಕ್ಕೆ ಅವಕಾಶವನ್ನೇ ನೀಡುತ್ತಿಲ್ಲ. ಮಾರನೆಯ ದಿನ 500 ಜನ ದಾಂಡಿಗರು 'ಕಾಶಿ ಸಂಸ್ಕೃತ ರಕ್ಷಾ ಸಂಘರ್ಷ ಸಮಿತಿ'ಯ ಬ್ಯಾನರ್ ಕೆಳಗೆ ಚಿತ್ರೀಕರಣಕ್ಕಾಗಿ ಮಾಡಿದ ಘಾಟದ ಸೆಟ್ಟನ್ನು ಸುಟ್ಟು ಹಾಕಿದರು. ಸಂಘ ಪರಿವಾರ ದವರು ಈ ಸಮಿತಿಯಲ್ಲಿ ಮುಖ್ಯವಾಗಿ ಭಾಗವಹಿಸಿದ್ದರು. ಇಂಡಿಯಾದ ಪವಿತ್ರ ಸ್ಥಳಗಳನ್ನು ಹಾಳು ಮಾಡುವುದಕ್ಕೆ ತಾವು ಬಿಡುವುದಿಲ್ಲವೆಂಬುದು ಘೋಷಣೆಕಾರರ ಮುಖ್ಯ ಘೋಷಣೆ ಯಾಗಿತ್ತು.

ರಾಜ್ಯದ ಆರ್ಥಿಕ ಮಂತ್ರಿ ಹರೀಶ್ಚಂದ್ರ ಶ್ರೀವತ್ಸಾ, ದೀಪಾ ಮೆಹ್ತಾ ಕಥೆಯನ್ನು ಸಾದರ ಪಡಿಸಿ ಅನುಮತಿ ಪಡೆಯ ಬೇಕಾಗಿತ್ತು ಎನ್ನುತ್ತಾರೆ. ಈತನ ಪತ್ನಿ ಜೋತ್ಸ್ನಾ, ಬಿ.ಜೆ.ಪಿ.ಯ ಮಹಿಳಾ ಶಾಖೆಯ ಕಾರ್ಯದರ್ಶಿ - ಪ್ರತಿಭಟನಾಕಾರರ ಮುಂಚೂಣಿಯಲ್ಲಿ ಇದ್ದರು.

ಕೆಲವು ವಿಧವೆಯರನ್ನು ಸೂಳೆಯರನ್ನಾಗಿ ಚಿತ್ರಿಸುವ ಮೂಲಕ ಭಾರತೀಯ ಸಂಸ್ಕೃತಿಯನ್ನು ನಾಶ ಮಾಡಲಾಗುತ್ತಿದೆ ಎಂಬುದು ಪ್ರತಿಭಟನಾಕಾರರ ಅಳಲು. ನಂದಿತಾ ಇದು ಸಿನೆಮಾದ ಒಂದು ಭಾಗ ಮಾತ್ರ ಎನ್ನುತ್ತಾರೆ. ಸಿನೆಮಾ ಯಾವ ಹಂತದಲ್ಲೂ ಮಹಿಳೆಯರನ್ನು ಕೆಟ್ಟದ್ದಾಗಿ ಚಿತ್ರಿಸಿಲ್ಲ ಎನ್ನುತ್ತಾರೆ.

ಸಂಘ ಪರಿವಾರದ ಪ್ರತಿಭಟನಾಕಾರರ ಪ್ರಕಾರ, ಚಿತ್ರದ ಶೀರ್ಷಿಕೆಯೇ ತೀರಾ ಸರಳೀಕೃತವಾಗಿದ್ದೂ, ಪವಿತ್ರ ಗಂಗಾ ನದಿಯ ಹೆಸರನ್ನು ಹಾಳು ಮಾಡುತ್ತದೆ ಎನ್ನುತ್ತಾರೆ.

ತುಳಸೀ ಘಾಟ್‌ನಲ್ಲಿದ್ದ ಚಿತ್ರೀಕರಣದ ಸೆಟ್ ಹಾಳು ಮಾಡಿದ ಎರಡು ದಿನಕ್ಕೇ ಸಂಘ ಪರಿಹಾರದವರು ಸಿನೆಮಾದ ಕಥೆ ತಮ್ಮ ಹತ್ತಿರ ಇದೆ ಎಂದು ಹೇಳಿ, ತಮಗೆ ಸರಿಕಾಣದ ಭಾಗಗಳನ್ನು ಹಿಂದಿನಲ್ಲಿ ಅನುವಾದಿಸಿ ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಹಂಚಿದರು. ಚಿತ್ರಕತೆಯೇ ತಮ್ಮ ಹೋರಾಟದ ಮುಖ್ಯ ಅಸ್ತ್ರ ಎಂದು ಮಾಧ್ಯಮದ ಸಂಘಟನಾಕಾರರಾದ ಡಾ. ಕೆ. ಕೆ. ಮಿಶ್ರರವರು ನುಡಿಯುತ್ತಾರೆ. ಫೆಬ್ರುವರಿ 3ರ ನಂತರ ಅರ್ಜುನ್ ಜೇಟಲೀಯವರನ್ನು ಭೇಟಿಯಾದ ನಂತರ ದೀಪಾ ಮೆಹ್ತಾ ತಮ್ಮ ಚಿತ್ರಕತೆಯಲ್ಲಿ ಬದಲಾವಣೆ ಮಾಡಿಕೊಳ್ಳುವುದಾಗಿ ತಿಳಿಸಿದರು. ಆದರೆ ಸಂಘ ಪರಿವಾರ ತನ್ನ ಹೋರಾಟವನ್ನು ಮುಂದುವರೆಸುವುದಾಗಿ ತಿಳಿಸಿದೆ.

ಈ ಜನರನ್ನು ದಾರಿ ತಪ್ಪಿಸಲಾಗಿದೆ ಎಂದು ನಿರ್ದೇಶಕಿ ದೀಪಾ ಮೆಹ್ತಾ ನುಡಿಯುತ್ತಾರೆ. ಪ್ರತಿಭಟನಾಕಾರರ ಹತ್ತಿರ ಇರುವ ಚಿತ್ರಕಥೆಯ ಪ್ರತಿ ಸರಿಯಾದದ್ದಲ್ಲ ಎಂದೂ ಆಕೆ ನುಡಿಯುತ್ತಾರೆ. ಈ ಪ್ರತಿಭಟನೆಯಲ್ಲಿ ತೊಡಗಿರುವ ಐದು, ಆರು ಸಂಘಟನೆಗಳೂ ಸಹ ತಮ್ಮಲ್ಲಿರುವ ಚಿತ್ರ ಪ್ರತಿ ನೀಡಿ ಅವರೆಲ್ಲರಿಗೆ ಒಪ್ಪಿಗೆಯಾದರೆ ಮುಂದುವರಿಯುವಂತೆ ಹೇಳುತ್ತಾರೆ.

ದೀಪಾ ಮೆಹ್ತಾಗೆ ಇದನ್ನು ಜೀರ್ಣಿಸಿಕೊಳ್ಳಲು ಸಾಧ್ಯವಿಲ್ಲ. ಅವರು ಒಪ್ಪಿಕೊಂಡ ಹಾಗೆ ಮುಂದುವರಿಯುವುದು ಸಾಧ್ಯವಿಲ್ಲ. 'ಇನ್‌ಫರ್‌ಮೇಶನ್ ಹಾಗೂ ಬ್ರಾಡ್‌ಕಾಸ್ಟಿಂಗ್' ನಿಂದ ಒಪ್ಪಿಗೆ ಪಡೆದ ಮೇಲೆ ತಾವೇಕೆ ಯಾರಿಗೆ ತೋರಿಸಬೇಕು ಎನ್ನುತ್ತಾರೆ. ಚಿತ್ರಕತೆಯಲ್ಲಿ ತಾವು ಮಾಡಿದ ಬದಲಾವಣೆಗಳು ಚಿಕ್ಕ ಮಟ್ಟದ್ದೂ ಎಂದು ಈಕೆ ನುಡಿಯುತ್ತಾರೆ. ಕೆಲವು ಸಂಜ್ಞೆ, ಕೆಲವು ಶಬ್ದಗಳು - ವಾರಣಾಸಿ ಜನರ ಭಾವನೆಗಳಿಗೆ ಪೆಟ್ಟು ಉಂಟುಮಾಡಬಹುದು ಎನ್ನುವಂತಹ ಬದಲಾವಣೆಗಳು ತಮ್ಮ ಚಿತ್ರದ ಮೇಲೆ, ಒಟ್ಟು ಚಿತ್ರಕತೆಯ ಮೇಲೆ ಯಾವುದೇ ಬದಲಾವಣೆ ಬೀರಲಾರವು ಎನ್ನುತ್ತಾರೆ.

ಚಿತ್ರೀಕರಣ ಮುಂದುವರೆಸುವುದಾಗಿ ಹೇಳಿದರೂ ಒಟ್ಟಾಗಿ ಗಲಾಟೆಯಾದರೆ ಏನು ಮಾಡುವುದು ಎಂಬುದೂ ಕೂಡಾ ಅವರ ಅಳಲು. ಆಕ್ರಮಣ ಮಾಡಿದರೆ ಏನು ಮಾಡುವುದು ಎಂದು ತಮ್ಮ ಅಸಹಾಯಕತೆ ವ್ಯಕ್ತಪಡಿಸುತ್ತಾರೆ. ತಮ್ಮ ಒಂಟಿಯಾಗಿ ಬಿಟ್ಟರೆ ಮಾತ್ರ ತಮಗೆ 'ವಾಟರ್' ಚಿತ್ರ ಮಾಡಿ ಮುಗಿಸಲು ಸಾಧ್ಯ ಎನ್ನುತ್ತಾರೆ. ಈ ರೀತಿಯ ಹರಣಗಳು ತಮ್ಮ ಗೌರವ-ಘನತೆ ಹಾಳು ಮಾಡಲಾರವು ಎಂದೂ ನುಡಿಯುತ್ತಾರೆ. ಈ ಘಟನೆಗಳಿಂದ ಈ ದೇಶದಲ್ಲಿ ತೀವ್ರವಾಗಿ ಬೆಳೆಯುತ್ತಿರುವ ಸಾಂಸ್ಕೃತಿಕ ಫ್ಯಾಸಿಸಂ, ಸಾಂಸ್ಕೃತಿಕ ಟೆರರೋರಿಸಂ ವ್ಯಕ್ತವಾಗುತ್ತದೆ ಎಂದು ದೀಪಾ ಮೆಹ್ತಾ ನುಡಿಯುತ್ತಾರೆ.

ಆಧಾರ : 'ದಿ ವೀಕ್', ಫೆಬ್ರುವರಿ - 6

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 40 ರೂ.

ಸಂಸ್ಥೆಗಳಿಗೆ : 100 ರೂ

ಸಂ. ಮಂಡಳಿ

REGD No. CPMG/KA/BGE/289/2000

BOOK-POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067